
ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

02 ಜುಲೈ, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 113 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಮೆಕ್ಸಿಕೊ ತಂಡವು ಫಿಫಾ ವಿಶ್ವಕಪ್ ನಾಕೌಟ್ ಹಂತದಲ್ಲಿ 40 ವರ್ಷಗಳ ನಂತರ ಗೆಲುವು ಸಾಧಿಸಿದರೆ, ಈಕ್ವೆಡಾರ್ ತಂಡದ ಅಭಿಮಾನಿಗಳು ತೀವ್ರ ಹತಾಶೆಗೊಳಗಾದರು.



ವೇದಿಕೆಯ ಮೇಲೆ ಪ್ರಶಸ್ತಿ ಹಿಡಿದು ನಿಂತ ಉದ್ಯಮಿಯ ಸಾವಿರ ನೆನಪುಗಳು » 2

ತಾಲ್ಲೂಕು ಕಚೇರಿಯಲ್ಲಿ ರೈತರ ಅಲೆದಾಟ ತಪ್ಪಲಿ » 3



ಸಂತೆ ದಿನ ಬಿಕ್ಕೋಡಿನಲ್ಲಿ ಸಂಚಾರಕ್ಕೆ ಸಂಕಷ್ಟ » 4

## ಭೂಸ್ವಾಧೀನ ಸಮಸ್ಯೆ ಬಗೆಹರಿದರೆ ಎತ್ತಿನಹೊಳೆ ಯೋಜನೆಗೆ ವೇಗ

- 100 ದಿನಗಳಲ್ಲಿ ಬಾಕಿ ಕೆಲಸ ಪೂರ್ಣಗೊಳಿಸುವ ಗುರಿ
- ಕಾಮಗಾರಿ ಪರಿಶೀಲಿಸಿದ ಸಚಿವ ರಾಮಲಿಂಗಾರೆಡ್ಡಿ

• ಪ್ರಜೋದಯ ವರದಿ

**ಬೇಲೂರು :** ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದ ಭೂಸ್ವಾಧೀನ ಸಮಸ್ಯೆ ಶೀಘ್ರವಾಗಿ ಬಗೆಹರಿದರೆ 171 ಕಿಲೋ ಮೀಟರ್ ಉದ್ದದ ನೀರು ಹರಿಸುವ ಕಾಲುವೆ ಕಾಮಗಾರಿಗೆ ವೇಗ ಸಿಗಲಿದೆ ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರು ಹೇಳಿದರು.

ತಾಲ್ಲೂಕಿನ ಐದಳ್ಳಕಾವಲು ಸಮೀಪ ಬುಧವಾರ ಎತ್ತಿನಹೊಳೆ ಯೋಜನೆಯ ಕಾಮಗಾರಿ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಮೂರು ಪ್ರದೇಶಗಳಲ್ಲಿ ಭೂಸ್ವಾಧೀನ ಸಮಸ್ಯೆ ಇದ್ದು, ರೈತರಿಗೆ ಸೂಕ್ತ ಪರಿಹಾರ ನೀಡಲಾಗುವುದು. ಪರಿಹಾರ ನೀಡಿದ ಬಳಿಕ ರೈತರು ಭೂಮಿ ಹಸ್ತಾಂತರಿಸಲಿದ್ದಾರೆ. ಹತ್ತು ದಿನಗಳೊಳಗೆ ಉಪ ವಿಭಾಗಾಧಿಕಾರಿ ಹಾಗು ಜಿಲ್ಲಾಧಿಕಾರಿ ಬಾಕಿ ಇರುವ ಸಮಸ್ಯೆಗಳ ವರದಿ ಸಲ್ಲಿಸಲಿದ್ದು, ಬಳಿಕ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು.

ಎತ್ತಿನಹೊಳೆ ಯೋಜನೆ ಪೂರ್ಣಗೊಂಡರೆ ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಹಾಗು ಹಾಸನ ಜಿಲ್ಲೆಗಳಿಗೆ ನೀರು ಪೂರೈಕೆಯಾಗಲಿದೆ. ಯೋಜನೆ ಆರಂಭವಾಗಿ ಹಲವು ವರ್ಷಗಳಾಗಿದ್ದು, ವಿವಿಧ ಹಂತಗಳಲ್ಲಿ ಸಾಕಷ್ಟು ಸಮಸ್ಯೆಗಳು ಎದುರಾಗಿದ್ದವು. ಈಗ ಕಾಮಗಾರಿಗೆ ಸ್ಪಷ್ಟ ರೂಪ ಸಿಗುತ್ತಿದೆ ಎಂದು ಹೇಳಿದರು.

ಒಂದು ತಿಂಗಳೊಳಗೆ ಜಿಲ್ಲಾಧಿಕಾರಿ ವರದಿ ಸರ್ಕಾರಕ್ಕೆ ಬಂದರೆ ಕಾಮಗಾರಿಯನ್ನು ಇನ್ನಷ್ಟು ವೇಗವಾಗಿ ಮುಂದುವರಿಸಲು ಸಾಧ್ಯವಾಗಲಿದೆ. ವಾಣಿವಿಲಾಸ ಸಾಗರಕ್ಕೆ ನೀರು ಹರಿಸುವ ಕಾಮಗಾರಿಯ ಪ್ರಗತಿ ಪರಿಶೀಲನೆಗಾಗಿ ಸ್ಥಳಕ್ಕೆ ಭೇಟಿ ನೀಡಿರುವುದಾಗಿ ಹೇಳಿದ ಅವರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಧಿಕಾರ ಸ್ವೀಕರಿಸಿದ ನಂತರ ಮೊದಲ 100 ದಿನಗಳಲ್ಲಿ ಪೂರ್ಣಗೊಳಿಸಬೇಕಾದ ಪ್ರಮುಖ ಕಾರ್ಯಕ್ರಮಗಳಲ್ಲಿ ಎತ್ತಿನಹೊಳೆ ಯೋಜನೆಯ ಬಾಕಿ ಸಮಸ್ಯೆಗಳ ಪರಿಹಾರವೂ ಒಂದಾಗಿದೆ. ಇದೇ ಅವಧಿಯಲ್ಲಿ ಸಮಸ್ಯೆಗಳನ್ನು ನಿವಾರಿಸುವುದು ಸರ್ಕಾರದ ಗುರಿಯಾಗಿದೆ ಎಂದರು.



**ಎತ್ತಿನಹೊಳೆ ಯೋಜನೆ ಕಾಮಗಾರಿಯಲ್ಲಿ ಲೋಪ ಕಂಡು ಬಂದರೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಎಲ್ಲಾ ರೀತಿಯ ಪ್ರಯತ್ನ ನಡೆಸಲಾಗುತ್ತಿದೆ.**

**-ರಾಮಲಿಂಗಾರೆಡ್ಡಿ, ಜಲಸಂಪನ್ಮೂಲ ಸಚಿವ**

ಜಲಸಂಪನ್ಮೂಲ ಸಚಿವ ರಾಮಲಿಂಗರೆಡ್ಡಿ ಅವರು ಮೊದಲಿಗೆ ಎತ್ತಿನಹೊಳೆ ಯೋಜನೆ ಹಾದು ಹೋಗಿರುವ ಅರಸೀಕೆರೆ ಮತ್ತು ಬೇಲೂರು ತಾಲ್ಲೂಕಿನ ರಾಮಸಾಗರ, ಹುಂಡಿಗನಾಳು, ಐದಳ್ಳಕಾವಲಿನಲ್ಲಿ ಕಾಮಗಾರಿ ವೀಕ್ಷಿಸಿದರು.

**259 ಕೋ.ರೂ. ವಿದ್ಯುತ್ ಬಿಲ್ ಬಾಕಿ**

ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದ 259 ಕೋ.ರೂ. ವಿದ್ಯುತ್ ಬಿಲ್ ಬಾಕಿ ಕುರಿತು ಪ್ರತಿಕ್ರಿಯಿಸಿದ ಸಚಿವರು, ಅದು ನಮ್ಮ ಇಲಾಖೆಯ ವಿಚಾರ. ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ಕ್ರಮ ಕೈಗೊಳ್ಳುತ್ತೇನೆ. ಯೋಜನೆಯ ಒಟ್ಟು ಅಂದಾಜು ವೆಚ್ಚ 23 ಸಾವಿರ ಕೋ.ರೂ. ಆಗಿದ್ದು, ಇದುವರೆಗೆ ಸುಮಾರು 18 ಸಾವಿರ ಕೋ.ರೂ.ವೆಚ್ಚ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

**ಕೇಂದ್ರದಿಂದ ಅನುದಾನ ನಿರೀಕ್ಷೆ**

ಸಚಿವ ಈಶ್ವರ್ ಖಂಡ್ರೆ ಅವರು ಎತ್ತಿನಹೊಳೆ ಯೋಜನೆಗೆ 4,700 ಕೋ.ರೂ. ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 5,300 ಕೋ.ರೂ. ನೆರವು ನೀಡುವ ಭರವಸೆ ನೀಡಿದ್ದರು. ಜಲಶಕ್ತಿ ಸಚಿವರ ಭೇಟಿಯ ವೇಳೆ ನಾವೂ ಮನವಿ ಮಾಡಿದ್ದೇವೆ. ಹಂತ ಹಂತವಾಗಿ ಕೇಂದ್ರದಿಂದ ಅನುದಾನ ಬಿಡುಗಡೆಯಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

ಸಚಿವರೊಂದಿಗೆ ಸಂಸದ ಶ್ರೇಯಸ್ ಪಟೇಲ್, ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಶಾಸಕ ಹೆಚ್.ಕೆ.ಸುರೇಶ್, ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಶುಕ್ಲ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಎತ್ತಿನಹೊಳೆ ಯೋಜನೆಯ ಮುಖ್ಯ ಇಂಜಿನೀಯರ್ ಆನಂದ್, ಕಾರ್ಯಪಾಲಕ ಇಂಜಿನೀಯರ್ ವೆಂಕಟೇಶ್ ಮತ್ತಿತರರು ಹಾಜರಿದ್ದರು.

## ಗೃಹ ಜ್ಯೋತಿ ಮರು ಪರಿಶೀಲನೆಗೆ ಜೆಡಿಎಸ್ ಕಿಡಿ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹ ಜ್ಯೋತಿ ಯೋಜನೆಯ ಮರು ಪರಿಶೀಲನೆಗೆ ಪ್ರತಿಪಕ್ಷ ಜೆಡಿಎಸ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ವಿದ್ಯುತ್ ಸಂಪರ್ಕಕ್ಕೂ ಜಾತಿ ಪ್ರಮಾಣ ಪತ್ರಕ್ಕೂ ಏನು ಸಂಬಂಧವೆಂದು ಪ್ರಶ್ನಿಸಿದೆ.

ಈ ಕುರಿತು ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಜೆಡಿಎಸ್, ರಾಜ್ಯ ಸರ್ಕಾರದ ಈ ಕ್ರಮವನ್ನು ಗ್ಯಾರಂಟಿ ಮೋಸ ಎಂದು ಟೀಕಿಸಿದೆ. ಎಲ್ಲರಿಗೂ ಫ್ರೀ, ಯಾವುದೇ ಷರತ್ತುಗಳಿಲ್ಲವೆಂದು ಭಾಷಣ ಬಿಗಿದು ಜನರ ಕಿವಿಗೆ ಹೂವಿಟ್ಟು ಅಧಿಕಾರ ಹಿಡಿದ ಕಾಂಗ್ರೆಸ್, ಈಗ ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಿದೆ. ಆರ್ಥಿಕ ದಿವಾಳಿತನವನ್ನು ಮುಚ್ಚಿಕೊಳ್ಳಲು ಜನಸಾಮಾನ್ಯರನ್ನು ಗೃಹಜ್ಯೋತಿ ಯೋಜನೆಯಿಂದ ಹೊರಹಾಕಲು ಕುತಂತ್ರ ಹೆಣೆದಿದೆ ಎಂದು ಗಂಭೀರ ಆರೋಪ ಮಾಡಿದೆ.

ಎಸ್ಕಾಂ ಅಧಿಕಾರಿಗಳು ಮನೆ-ಮನೆಗೆ ತೆರಳಿ ಪರಿಶೀಲನೆ ನಡೆಸುತ್ತಿದ್ದಾರೆ. ಈ ವೇಳೆ ವಿವಿಧ ದಾಖಲೆಗಳನ್ನು ಕೇಳಿ ಜನರನ್ನು ಆತಂಕಕ್ಕೆ ದೂಡಲಾಗುತ್ತಿದೆ. ದಾಖಲೆಗಳ ಹೆಸರಿನಲ್ಲಿ ಜನರನ್ನು ಅನಗತ್ಯವಾಗಿ ಅಲೆದಾಡಿಸಲಾಗುತ್ತಿದೆ ಎಂದು ಜೆಡಿಎಸ್ ವಾಗ್ದಾಳಿ ನಡೆಸಿದೆ.





ಉಚಿತ ವಿದ್ಯುತ್ ಪಡೆಯಲು ಪಾನ್ ಕಾರ್ಡ್ ಏಕೆ ಬೇಕು, ವಿದ್ಯುತ್ ಸಂಪರ್ಕಕ್ಕೂ ಜಾತಿ ಪ್ರಮಾಣ ಪತ್ರಕ್ಕೂ ಏನು ಸಂಬಂಧ, ಕರ್ನಾಟಕದ ನಿವಾಸಿ ಎಂದು ದೃಢೀಕರಿಸಲು ಆಧಾರ್ ಕಾರ್ಡ್ ಅಥವಾ ಮತದಾರರ ಗುರುತಿನ ಚೀಟಿ ಸಾಕಾಗುವುದಿಲ್ಲವೇ, ಕಳ್ಳ ಮಾರ್ಗದಲ್ಲಿ ಷರತ್ತುಗಳನ್ನು ವಿಧಿಸಿ, ಫಲಾನುಭವಿಗಳ ಸಂಖ್ಯೆ ಕಡಿತಗೊಳಿಸಿ ಸಾವಿರಾರು ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ನಾಮ ಹಾಕುವುದು, ಬಡವರು, ರೈತರು ಮತ್ತು ಮಧ್ಯಮ ವರ್ಗದವರನ್ನು ದಿನಕ್ಕೊಂದು ದಾಖಲೆ ಕೇಳಿ ಕಚೇರಿಗಳಿಗೆ ಅಲೆದಾಡಿಸಿ, ಸತಾಯಿಸಿ, ಸೌಲಭ್ಯಗಳಿಂದ ವಂಚಿಸುವುದೇ ನಿಮ್ಮ ಸಾಧನೆಯೇ, ಕಾಂಗ್ರೆಸ್ ದುರಾಡಳಿತದಲ್ಲಿ ಕನ್ನಡಿಗರಿಗೆ ದಿನವೂ ಸಂಕಟವೆಂದು ಕಿಡಿಕಾರಿದೆ.

## ಬೀಜೋಪಚಾರವಾಗದ 180 ಕೆ.ಜಿ. ಬಿತ್ತನೆ ಮುಸುಕಿನ ಜೋಳ ಜಪ್ತಿ



• ಪ್ರಜೋದಯ ವರದಿ

**ಹಾಸನ :** ಪರೀಕ್ಷೆಗೆ ಒಳಪಡಿಸದ ಮುಸುಕಿನ ಜೋಳದ ಬಿತ್ತನೆ ಬೀಜ ಮಾರಾಟಕ್ಕೆ ದಾಸ್ತಾನು ಮಾಡಿದ್ದ ಪ್ರಕರಣವನ್ನು ಕೃಷಿ ಇಲಾಖೆಯ ಜಾಗೃತ ದಳ ಪತ್ತೆ ಹಚ್ಚಿ, ಜಪ್ತಿ ಮಾಡಿದೆ.

ತಾಲ್ಲೂಕಿನ ಸಾಲಗಾಮೆ ಹೋಬಳಿಯ ಕೊಂಡಜ್ಜಿ ಕೊಪ್ಪಲು ಗ್ರಾಮದ ಬಿತ್ತನೆ ಬೀಜ ಮಾರಾಟ ಮಳಿಗೆಯೊಂದರಲ್ಲಿ ಅಧಿಕಾರಿಗಳು ಪರೀಕ್ಷೆ ನಡೆಸಿದಾಗ ಸುಮಾರು 85 ಸಾವಿರ ರೂ. ಮೌಲ್ಯದ 180 ಕೆ.ಜಿ. ಬಿತ್ತನೆ ಬೀಜ ಪತ್ತೆಯಾಗಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರ ನಿರ್ದೇಶನದಂತೆ ಮುಸುಕಿನ ಜೋಳ ಬೆಳೆಯಲ್ಲಿ ಕಾಣಿಸಿಕೊಳ್ಳುತ್ತಿರುವ ಬಿಳಿ ಸುಳಿ ರೋಗ ನಿಯಂತ್ರಣದ ಉದ್ದೇಶದಿಂದ ರೋಗ ಹಾಗು ಶಿಲೀಂದ್ರ ಪರೀಕ್ಷೆಗೆ ಒಳಪಟ್ಟ ಪ್ರಮಾಣಿತ ಬಿತ್ತನೆ ಬೀಜಗಳನ್ನು ಮಾರಾಟ ಮಾಡುವಂತೆ ಕೃಷಿ ಇಲಾಖೆ ಬೀಜ ಮಾರಾಟಗಾರರು ಹಾಗು ಸರಬರಾಜುದಾರರಿಗೆ ಸೂಚನೆ ನೀಡಲಾಗಿತ್ತು.

ಈ ಹಿನ್ನಲೆಯಲ್ಲಿ ಸಹಾಯಕ ಕೃಷಿ ನಿರ್ದೇಶಕ ಡಿ.ಕೆ.ಯೋಗಾನಂದ ಅವರ ನೇತೃತ್ವದ ತಂಡ ಸಾಲಗಾಮೆ ಹೋಬಳಿಯ ಕೊಂಡಜ್ಜಿ ಕೊಪ್ಪಲು ಗ್ರಾಮದ ರಸಗೊಬ್ಬರ, ಕೀಟನಾಶಕ ಹಾಗು ಬಿತ್ತನೆ ಬೀಜ ಮಾರಾಟ ಮಳಿಗೆಗಳನ್ನು ಪರಿಶೀಲಿಸಿತು. ಈ ವೇಳೆ ಕಾರ್ತಿಕ್ ಟ್ರೇಡರ್ಸ್ ಮಳಿಗೆಯಲ್ಲಿ ಬಿತ್ತನೆ ಬೀಜ ಪರವಾನಗಿಯಲ್ಲಿ ಅನುಮತಿ ಇಲ್ಲದ ಹಾಗು ರೋಗ ಶಿಲೀಂದ್ರ, ಪರೀಕ್ಷೆಗೆ ಒಳಪಡಿಸದ ಮುಸುಕಿನ ಜೋಳದ ಬಿತ್ತನೆ ಬೀಜವನ್ನು ಮಾರಾಟಕ್ಕಾಗಿ ದಾಸ್ತಾನು ಮಾಡಿರುವುದು ಪತ್ತೆಯಾಯಿತು ಎಂದು ಜಂಟಿ ಕೃಷಿ ನಿರ್ದೇಶಕ ರಮೇಶ್ ಕುಮಾರ್ ತಿಳಿಸಿದ್ದಾರೆ.

## ಶೀಘ್ರದಲ್ಲೇ ಸಚಿವ ಸಂಪುಟ ವಿಸ್ತರಣೆ: ರಾಮಲಿಂಗಾರೆಡ್ಡಿ

### ಆಕಾಂಕ್ಷಿಗಳ ಹಿರಿಯ ಶಾಸಕರ ಪಟ್ಟಿಯಲ್ಲಿ ಕೆ.ಎಂ.ಶಿವಲಿಂಗೇಗೌಡ | ಪ್ರತಿ ಜಿಲ್ಲೆಗೂ ಪ್ರಾತಿನಿಧ್ಯ ಸಿಗಲಿ

• ಪ್ರಜೋದಯ ವರದಿ

**ಹಾಸನ:** ಶೀಘ್ರದಲ್ಲೇ ರಾಜ್ಯ ಸಚಿವ ಸಂಪುಟ ವಿಸ್ತರಣೆ ಆಗಲಿದ್ದು, ಸಚಿವ ಸ್ಥಾನಕ್ಕೆ ಸಾಕಷ್ಟು ಆಕಾಂಕ್ಷಿಗಳಿದ್ದಾರೆ. ಹಿರಿಯ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆ ಪಟ್ಟಿಯಲ್ಲಿ ಕೆ.ಎಂ. ಶಿವಲಿಂಗೇಗೌಡ ಅವರೂ ಇದ್ದಾರೆಂದು ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರು ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲಾ ಜಿಲ್ಲೆಗಳಿಗೂ ಸೂಕ್ತ ಪ್ರಾತಿನಿಧ್ಯ ಸಿಗಬೇಕೆಂಬುದು ನನ್ನ ಅಭಿಪ್ರಾಯ. ನಾನು ವೈಯಕ್ತಿಕವಾಗಿ ಯಾವುದೇ ಖಾತೆಯನ್ನು ಕೇಳಿಲ್ಲ, ಕೇಳುವ ಅಭ್ಯಾಸವೂ ನನಗಿಲ್ಲವೆಂದರು.

ಸರ್ಕಾರಿ ಖಜಾನೆ ಖಾಲಿಯಾಗಿರುವ ಕಾರಣ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಲ್ಲಿ ಪರಿಷ್ಕರಣೆ ಮಾಡುತ್ತಿದೆ ಎಂಬ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರ ಆರೋಪವನ್ನು ತಳ್ಳಿ ಹಾಕಿದ ರಾಮಲಿಂಗಾರೆಡ್ಡಿ ಅವರು, ಆರ್.ಅಶೋಕ್ ಅವರು ಪ್ರತಿಪಕ್ಷದಲ್ಲಿದ್ದಾರೆ. ವಿರೋಧ ಪಕ್ಷದವರಾಗಿ ಸರ್ಕಾರವನ್ನು ಟೀಕಿಸುವುದು ಅವರ ಕೆಲಸ. ಅದಕ್ಕಾಗಿ ಅವರು ಆ ರೀತಿಯ ಹೇಳಿಕೆ ನೀಡುತ್ತಿದ್ದಾರೆ. ಬಿಜೆಪಿ ಆಡಳಿತವಿರುವ ಆಂಧ್ರಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ಪಶ್ಚಿಮ ಬಂಗಾಳ ಹಾಗು ದೆಹಲಿಯಲ್ಲಿ ಅವರು ನೀಡಿರುವ ಸೌಲಭ್ಯಗಳ ಬಗ್ಗೆಯೂ ಮಾತನಾಡಲಿ ಎಂದು ತಿರುಗೇಟು ನೀಡಿದರು.

ದೇಶದ ಸಾಲದ ಪ್ರಮಾಣ ಕುರಿತು ಪ್ರತಿಕ್ರಿಯಿಸಿದ ಅವರು, ಸ್ವಾತಂತ್ರ್ಯದ ನಂತರದಿಂದ ಡಾ.ಮನಮೋಹನ್ ಸಿಂಗ್ ಅವರ ಸರ್ಕಾರದ ಅವಧಿ ಮುಗಿಯುವವರೆಗೆ ದೇಶದ ಸಾಲ ಸುಮಾರು 53.10 ಲಕ್ಷ ಕೋಟಿ ಇತ್ತು. ಈಗ ಅದು ಮೂರು ಪಟ್ಟು ಹೆಚ್ಚಾಗಿದೆ. ಅದರ ಬಗ್ಗೆಯೂ ಪ್ರತಿಪಕ್ಷಗಳು ಮಾತನಾಡಬೇಕೆಂದು ಹೇಳಿದರು.

ಗ್ಯಾರಂಟಿ ಯೋಜನೆಗಳಿಗೆ ಜಾತಿ ಪ್ರಮಾಣ ಪತ್ರ ಕೇಳುತ್ತಿರುವ ಕುರಿತು ಮಾತನಾಡಿದ ಅವರು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೀಸಲಾದ ಅನುದಾನವನ್ನು ಅರ್ಹರಿಗೆ ತಲುಪಿಸುವ ಉದ್ದೇಶದಿಂದಲೇ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ಅನರ್ಹರು ಸೌಲಭ್ಯ ಪಡೆಯದಂತೆ ತಡೆಯಲು ಸ್ಪಷ್ಟತೆ ಅಗತ್ಯವಾಗಿದೆ. ಅದರಲ್ಲಿ ತಪ್ಪೇನಿಲ್ಲವೆಂದರು.

**ವಿವಾದ ಮಾತುಕತೆಯಲ್ಲೇ ಬಗೆಹರಿಯಲಿ**

ಹೇಮಾವತಿ ಲಿಂಕ್ ಕಾಲುವೆ ಯೋಜನೆಗೆ ಸಂಬಂಧಿಸಿದಂತೆ ಶಾಸಕರ ನಡುವೆ ವ್ಯಕ್ತವಾಗಿರುವ ಭಿನ್ನಾಭಿಪ್ರಾಯವನ್ನು ಮಾತುಕತೆಯ ಮೂಲಕ ಬಗೆಹರಿಸಲಾಗುವುದು. ಒಂದು ಕಡೆ ನೀರು ತಲುಪುತ್ತಿಲ್ಲವೆಂದು ಶಾಸಕರು ಹೇಳುತ್ತಿದ್ದಾರೆ. ಮತ್ತೊಂದೆಡೆ ನೀರು ಕಡಿಮೆಯಾಗಲಿದೆ ಎಂಬ ಆತಂಕ ವ್ಯಕ್ತಪಡಿಸಲಾಗುತ್ತಿದೆ. ಸಂಬಂಧಪಟ್ಟ ಎಲ್ಲರೂ ಕುಳಿತು ಚರ್ಚಿಸಿ ಸಮಸ್ಯೆ ಬಗೆಹರಿಸಿಕೊಳ್ಳುತ್ತೇವೆಂದು ತಿಳಿಸಿದರು.



### ನೀರು ಹರಿಸುವುದು ಪ್ರಾಧಿಕಾರದ ನಿರ್ಧಾರ

ತಮಿಳುನಾಡಿಗೆ ಕಾವೇರಿ ನೀರು ಹರಿಸುವ ಕುರಿತು ಪ್ರತಿಕ್ರಿಯಿಸಿದ ಸಚಿವರು, ಈ ಬಗ್ಗೆ ಅಂತಿಮ ತೀರ್ಮಾನವನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕೈಗೊಳ್ಳುತ್ತದೆ. ರಾಜ್ಯದಲ್ಲಿ ಲಭ್ಯವಿರುವ ನೀರಿನ ಪ್ರಮಾಣ, ಕುಡಿಯುವ ನೀರಿನ ಅಗತ್ಯ ಸೇರಿ ಎಲ್ಲಾ ಅಂಶಗಳನ್ನು ಪರಿಗಣಿಸಿ ಪ್ರಾಧಿಕಾರ ಸೂಚನೆ ನೀಡುತ್ತದೆ. ನೀರು ಸಾಕಷ್ಟು ಇದ್ದರೆ ಬಿಡುಗಡೆ ಮಾಡಲು, ಇಲ್ಲದಿದ್ದರೆ ಮಳೆ ಬರುವವರೆಗೆ ಕಾಯುವಂತೆ ಪ್ರಾಧಿಕಾರವೇ ನಿರ್ದೇಶನ ನೀಡುತ್ತದೆ. ಉತ್ತಮ ಮಳೆಯಾಗಿ ರಾಜ್ಯದ ಜಲಾಶಯಗಳು ತುಂಬಲಿ ಎಂಬುದು ನಮ್ಮ ಆಶಯ ಎಂದರು.

### ಮೇಕೆದಾಟು ತಮಿಳುನಾಡಿಗೂ ಅನುಕೂಲ

ಮೇಕೆದಾಟು ಯೋಜನೆಯ ಸವಿವರ ಯೋಜನಾ ವರದಿ (ಡಿಪಿಆರ್) ಸಿದ್ಧವಾಗಿದೆ. ಈ ಸಂಬಂಧ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಕೆಯಾಗಿದ್ದ ಅರ್ಜಿಗಳು ವಜಾಗೊಂಡಿವೆ. ಯೋಜನೆಯಡಿ ನಮಗೆ 4.75 ಟಿಎಂಸಿ ಕುಡಿಯುವ ನೀರನ್ನು ಬಳಸಲು ಅವಕಾಶವಿದೆ. ನೀರನ್ನು ಸಂಗ್ರಹಿಸಿದರೆ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾ ಗುತ್ತದೆ. ಇದರಿಂದ ತಮಿಳುನಾಡಿನ ರೈತರೂ ಪ್ರಯೋಜನ ಪಡೆಯಲಿದ್ದಾರೆ. ಈ ಯೋಜನೆಯಡಿ ಒಂದು ಎಕರೆ ಕೃಷಿ ಭೂಮಿಗೂ ನೀರು ಬಳಸುವುದಿಲ್ಲವೆಂಬುದನ್ನು ಅವರೂ ಅರ್ಥ ಮಾಡಿಕೊಳ್ಳಬೇಕೆಂದು ಹೇಳಿದರು.

## ಗ್ಯಾರಂಟಿಗಳಿಂದ ರೈತರು, ಬಡವರನ್ನು ಹೊರಗಿಡಲು ಯತ್ನ

### ರಾಜ್ಯ ರೈತ ಸಂಘ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಆರೋಪ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲ ಉದ್ದೇಶವನ್ನು ಮರೆತು ವಿವಿಧ ಮಾನದಂಡಗಳ ಹೆಸರಿನಲ್ಲಿ ಬಡವರು ಹಾಗು ರೈತರನ್ನು ಯೋಜನೆಗಳಿಂದ ಹೊರಗಿಡಲು ಮುಂದಾಗಿದೆ ಎಂದು ರಾಜ್ಯ ರೈತ ಸಂಘ ಹಾಗು ಹಸಿರು ಸೇನೆಯ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರು ಆರೋಪಿಸಿದರು.

ಬುಧವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳು ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಆಸರೆಯಾಗ ಬೇಕಿದೆ. ಆದರೆ, ಸರ್ಕಾರ ಅನಗತ್ಯ ನಿಯಮಗಳನ್ನು ಜಾರಿಗೆ ತಂದು ಅರ್ಹ ಫಲಾನುಭವಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಯತ್ನ ನಡೆಸುತ್ತಿದೆ ಎಂದು ಟೀಕಿಸಿದರು.



ಗ್ಯಾರಂಟಿ ಯೋಜನೆಗಳು ಶ್ರೀಮಂತರಿಗಾಗಿ ರೂಪುಗೊಂಡಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿರುವ ಕೃಷಿ ಕಾರ್ಮಿಕರು ಆರ್ಥಿಕ ಸಂಕಷ್ಟದಲ್ಲಿದ್ದು, ದಾಖಲೆಗಳ ನೆಪದಲ್ಲಿ ಅವರನ್ನು ಯೋಜನೆಗಳಿಂದ ವಂಚಿಸುವುದು ಸರಿಯಲ್ಲ. ಬಜೆಟ್ ಉಳಿಸುವ ಉದ್ದೇಶದಿಂದ ಫಲಾನುಭವಿಗಳನ್ನು ಕಡಿತಗೊಳಿಸುವ ಬದಲು, ಎಲ್ಲಾ ಅರ್ಹ ಕುಟುಂಬಗಳಿಗೂ ಯೋಜನೆಗಳ ಪ್ರಯೋಜನ ತಲುಪುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ಅಗತ್ಯ ಪ್ರಮಾಣದ

» ನಾಲ್ಕನೇ ಪುಟದಲ್ಲಿ

## ಜು.6-7 ರಂದು ವಿಸ್ಮಯ ಕೀಟಗಳ, ಪಕ್ಷಿಗಳ ಛಾಯಚಿತ್ರ ಪ್ರದರ್ಶನ

• ಪ್ರಜೋದಯ ವರದಿ

**ಹಾಸನ :** ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಹಾಸನಾಂಬ ಸಭಾಂಗಣದಲ್ಲಿ ಜು.6 ಮತ್ತು 7 ರಂದು ವಿಸ್ಮಯ ಕೀಟಗಳ ಮತ್ತು ಪಕ್ಷಿಗಳ ಛಾಯಚಿತ್ರ ಪ್ರದರ್ಶನ ಹಾಗೂ ಬೇಕರಿ-ಜೈವಿಕ ಉತ್ಪನ್ನಗಳ ಪ್ರದರ್ಶನ, ಮಾರಾಟ ಕಾರ್ಯಕ್ರಮ ಆಯೋಜಿ ಸಲಾಗಿದೆ.

ಮಂಡ್ಯ ಕೃ.ವಿ.ವಿ.ವಿ.ವಿ ಫಾರಂ ಕುಲಪತಿ ಡಾ||ಕೆ.ಸಿ. ನಾರಾಯಣಸ್ವಾಮಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಅವರು ಉಪಸ್ಥಿತಿಯಲ್ಲಿ, ಕೃ.ಮ.ವಿ (ಕೃಷಿ) ಡೀನ್ ಡಾ||ಕೆ. ಎಸ್.ಮುನಿಸ್ವಾಮಿಗೌಡ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ಹೆಚ್.ಪಿ. ಮೋಹನ್, ಜಿಲ್ಲಾ ಪಕ್ಷಿ ವೀಕ್ಷಕರ ಸಂಘದ ಅಧ್ಯಕ್ಷ ಬಿ. ಎಸ್.ದೇಸಾಯಿ, ತಿಪಟೂರು ಕೊನೆಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥ ಡಾ||ಎಂ.ಹೆಚ್.ಶಂಕರ್ , ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕ ಅಮಜಾದ್ ಖಾನ್, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕ ಬಿ.ಆರ್.ಉದಯ್ ಕುಮಾರ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ಕೆ.ಟಿ.ಶಿವಪ್ರಸಾದ್ ನಿಧನಕ್ಕೆ ಗಣ್ಯರು, ಒಡನಾಡಿಗಳ ಕಂಬನಿ

• ಪ್ರಜೋದಯ ವರದಿ

**ಹಾಸನ:** ಅಂತರಾಷ್ಟ್ರೀಯ ಚಿತ್ರಕಲಾವಿದ ಕೆ.ಟಿ.ಶಿವಪ್ರಸಾದ್ ಅವರು ಅಂತ್ಯಕ್ರಿಯೆ ಬುಧವಾರ ನಗರ ಹೊರವಲಯದ ಬಿಟ್ಟಗೌಡನಹಳ್ಳಿಯ ಚಿತಾಗಾರದಲ್ಲಿ ಅವರ ಇಚ್ಛೆಯಂತೆ ಧಾರ್ಮಿಕ ಸಂಪ್ರದಾಯವಿಲ್ಲದೆ ನೆರವೇರಿತು.

ಅದಕ್ಕೂ ಮುನ್ನ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ನಗರದ ಕಲಾಭವನದ ಮುಂಭಾಗ ಕೆ.ಟಿ. ಶಿವಪ್ರಸಾದ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅವರ ನಿಧನಕ್ಕೆ ಜಿಲ್ಲೆಯ ವಿವಿಧ ಗಣ್ಯರು, ಒಡನಾಡಿಗಳು ಕಂಬನಿ ಮಿಡಿದು ಅಂತಿಮ ನಮನ ಸಲ್ಲಿಸಿದರು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್, ಅಪರ ಜಿಲ್ಲಾ ಪೊಲೀಸ್ ಅಧೀಕ್ಷಕ ಶ್ರೀನಿಧಿ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್. ಮುದ್ದೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ, ಸಾಹಿತಿಗಳಾದ ಬಾನು ಮುಷ್ತಾಕ್, ರೂಪಾ ಹಾಸನ, ಕಲಾವಿದರಾದ ದೇಸಾಯಿ, ಹಿರಿಯ ದಲಿತ ಮುಖಂಡರಾದ ನಾರಾಯಣ ದಾಸ್, ಹೆಚ್.ಕೆ.ಸಂದೇಶ್, ಕೃಷ್ಣದಾಸ್ ಸೇರಿ ವಿವಿಧ ಕ್ಷೇತ್ರಗಳ ಗಣ್ಯರು ಅಂತಿಮ ದರ್ಶನ ಪಡೆದು, ಶಿವಪ್ರಸಾದ್ ಅವರ ಪತ್ನಿ ಸುವರ್ಣ ಹಾಗು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ರೈತ ಸಂಘ, ದಲಿತ ಸಂಘರ್ಷ ಸಮಿತಿಯ ಮುಖಂಡರು ಸಂತಾಪ ಸೂಚಿಸಿ, ದಲಿತ ಹಾಗು ರೈತ ಚಳವಳಿಗೆ ಭದ್ರ ಅಡಿಪಾಯ ಹಾಕಿದ ಮೇರು ವ್ಯಕ್ತಿತ್ವ ಶಿವಪ್ರಸಾದ್ ಅವರದು. ಐಷಾರಾಮಿ ಜೀವನವನ್ನು ತಿರಸ್ಕರಿಸಿ ಜನ ಸಾಮಾನ್ಯರ ನಡುವೆ ಬದುಕು ಕಟ್ಟಿಕೊಂಡ ಅವರು ಬುದ್ಧ, ಬಸವಣ್ಣ ಹಾಗು ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಅವರ ಅಗಲಿಕೆ ದಲಿತ ಮತ್ತು ರೈತ ಚಳುವಳಿಗೆ ತುಂಬಲಾರದ ನಷ್ಟವೆಂದು ಸಂತಾಪ ಸೂಚಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ಮಾತನಾಡಿ, ಹಿರಿಯ ಕಲಾವಿದ ಹಾಗು ಹೋರಾಟಗಾರರಾಗಿದ್ದ ಶಿವಪ್ರಸಾದ್ ಅವರು ಸಾಹಿತ್ಯ ಮತ್ತು ಕಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ. ಅವರಿಗೆ ಸಂದಿರುವ ಪ್ರಶಸ್ತಿಗಳು ಜಿಲ್ಲೆಗೆ ಗೌರವ ತಂದಿವೆ. ಅವರ ಬದುಕು ಮುಂದಿನ ಪೀಳಿಗೆಗೆ ಮಾದರಿಯಾಗಿದೆ ಎಂದು ಹೇಳಿದರು.

» ನಾಲ್ಕನೇ ಪುಟದಲ್ಲಿ



**ಚಿತ್ರಕಲಾವಿದ, ಪ್ರಗತಿಪರ ಚಿಂತಕ ಕೆ.ಟಿ.ಶಿವಪ್ರಸಾದ್ ಅವರು ಕಾರ್ಲೆ ಗ್ರಾಮದ ಹೆಮ್ಮೆಯ ಪುತ್ರರಾಗಿದ್ದರು. ಅವರ ಅದ್ವಿತೀಯ ಕಲಾಸಾಧನೆ, ಪ್ರಗತಿಪರ ಚಿಂತನೆ ಹಾಗು ಸಾಮಾಜಿಕ ಬದ್ಧತೆಯ ಮೂಲಕ ರಾಜ್ಯ, ರಾಷ್ಟ್ರ ಮತ್ತು ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದರು. ಅವರ ಅಗಲಿಕೆ ಕನ್ನಡ ನಾಡಿನ ಕಲಾ, ಸಾಹಿತ್ಯ ಹಾಗೂ ಸಾಮಾಜಿಕ ಕ್ಷೇತ್ರಗಳಿಗೆ ತುಂಬಲಾರದ ನಷ್ಟವಾಗಿದೆ. ಪರಮಾತ್ಮ ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ.**

**- ಶ್ರೇಯಸ್ ಪಟೇಲ್, ಸಂಸದ**

**ಕೆ.ಟಿ.ಶಿವಪ್ರಸಾದ್ ಅವರ ನಿಧನ ನೋವುಂಟು ಮಾಡಿದೆ. ಅವರ ಸಾಧನೆ ಇಂದಿನ ಯುವಪೀಳಿಗೆಗೆ ದಾರಿದೀಪವಾಗಿದೆ. ಅವರ ಕಲಾಕೃತಿಗಳು ಹಾಗು ಛಾಯಾಚಿತ್ರಗಳು ನನ್ನನ್ನೂ ಪ್ರಭಾವಿಸಿವೆ. ಮುಂದಿನ ದಿನಗಳಲ್ಲಿ ದೊಡ್ಡಮಟ್ಟದಲ್ಲಿ ಸಂತಾಪ ಸೂಚಕ ಸಭೆಯನ್ನು ಹಮ್ಮಿಕೊಳ್ಳಲಾಗುವುದು**

**-ಹೆಚ್.ಪಿ.ಸ್ವರೂಪ್, ಶಾಸಕ**

## ಪಾರ್ಕಿಂಗ್ ಟೆಂಡರ್‌ನಲ್ಲಿ ಅಕ್ರಮ ಆರೋಪ

### ದೇವಿಗೆರೆ ಆವರಣದಲ್ಲಿ ಸಾರ್ವಜನಿಕರು, ವ್ಯಾಪಾರಿಗಳಿಂದ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ನಗರದ ದೇವಿಗೆರೆ ಆವರಣದಲ್ಲಿರುವ ಖಾಸಗಿ ವಾಹನಗಳ ಪಾರ್ಕಿಂಗ್ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ವ್ಯಾಪಾರಿಗಳು ಹಾಗು ಸಾರ್ವಜನಿಕರು ಬುಧವಾರ ಪಾರ್ಕಿಂಗ್ ಸ್ಥಳದಲ್ಲೇ ಪ್ರತಿಭಟನೆ ನಡೆಸಿದರು.

ಪಾರ್ಕಿಂಗ್ ಟೆಂಡರ್ ಪ್ರಕ್ರಿಯೆ ಪಾರದರ್ಶಕವಾಗಿ ನಡೆದಿಲ್ಲ. ಸಾರ್ವಜನಿಕರಿಗೆ ಸಮರ್ಪಕವಾಗಿ ಟೆಂಡರ್ ಕುರಿತು ಪ್ರಕಟಣೆ ನೀಡಿಲ್ಲ ಹಾಗೂ ಕಡಿಮೆ ಮೊತ್ತಕ್ಕೆ ಟೆಂಡರ್ ಅಂತಿಮಗೊಳಿಸಲಾಗಿದೆ. ಕಳೆದ ಬಾರಿ ಪಾರ್ಕಿಂಗ್ ಟೆಂಡರ್ 8.5 ಲ.ರೂ. ಗೆ ನಿಗದಿಯಾಗಿದ್ದರೆ, ಈ ಬಾರಿ ಕೇವಲ 4.5 ಲ.ರೂ.ಗೆ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆಯ ಬಗ್ಗೆ ಅನುಮಾನಗಳು ಮೂಡಿವೆ ಎಂದು ಆರೋಪಿಸಿದರು.



ಈ ಜಾಗದಲ್ಲಿ ಹೆಚ್ಚು ವಾಹನ ಗಳನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪಾರ್ಕಿಂಗ್‌ಗೆ ಶುಲ್ಕ ವಸೂಲಿ ಮಾಡಬಾರದು. ಈ ಹಿಂದೆ ನಗರಸಭೆಯಿಂದ ಟೆಂಡರ್ ಪ್ರಕ್ರಿಯೆ ನಡೆಸಲಾಗಿತ್ತು. ಆದರೆ, ಈ ಬಾರಿ ಮುಜರಾಯಿ ಇಲಾಖೆಗೆ ಸೇರುತ್ತದೆ ಎಂದು ತಹಶೀಲ್ದಾರ್ ಅವರ ಮೂಲಕ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಈ ಬಗ್ಗೆ ಯಾರಿಗೂ ಮಾಹಿತಿ ನೀಡಿಲ್ಲ. ತಹಶೀಲ್ದಾರ್‌ಗೆ ಲಂಚ ನೀಡಿ ಟೆಂಡರ್ ಮಾಡಿಸಿಕೊಳ್ಳಲಾಗಿದೆ ಎಂದು ದೂರಿದರು.


ಪಾರದರ್ಶಕವಾಗಿ ಮರು ಟೆಂಡರ್ ಕರೆಯುವವರೆಗೆ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲುಗಡೆ ಶುಲ್ಕ ವಸೂಲಿ ಮಾಡಬಾರದು. ಸಂಬಂಧಪಟ್ಟ ಅಧಿಕಾರಿಗಳು ಟೆಂಡರ್ ದಾಖಲೆಗಳನ್ನು ಸಾರ್ವಜನಿಕರ ಮುಂದೆ ಬಹಿರಂಗಪಡಿಸಬೇಕೆಂದು ಆಗ್ರಹಿಸಿದರು. ಕೆಲಕಾಲ ಪಾರ್ಕಿಂಗ್ ಸ್ಥಳದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ಮೊಖಂ ಹೂಡಿದ್ದರು.

### ಮನವಿ ಆಲಿಸಿದ ಸಂಸದ

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಸಂಸದ ಶ್ರೇಯಸ್ ಪಟೇಲ್ ಅವರು ಪ್ರತಿಭಟನಾ ನಿರತರ ಸಮಸ್ಯೆ ಆಲಿಸಿ ಮಾತನಾಡಿ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮಾ ಲೋಚನೆ ನಡೆಸಿ, ತೊಂದರೆ ಯಾಗದಂತೆ ಸಮಸ್ಯೆಯನ್ನು ಶೀಘ್ರವಾಗಿ ಬಗೆಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗುವುದೆಂದು ಭರವಸೆ ನೀಡಿದರು.

# ವೇದಿಕೆಯ ಮೇಲೆ ಪ್ರಶಸ್ತಿ ಹಿಡಿದು ನಿಂತ ಉದ್ಯಮಿಯ ಸಾವಿರ ನೆನಪುಗಳು


ಇದು ಕಾಲ್ಪನಿಕ ಬರಹವಾಗಿದೆ. ವೇದಿಕೆಯಲ್ಲಿ ನೆರೆದಿರುವರ ಎಲ್ಲಾ ಗಣ್ಯಮಾನ್ಯರೇ, ಈ ವರ್ಷದ ಜೀವಮಾನ ಪ್ರಶಸ್ತಿಯ ಸಾಧಕನ ದಿಗ್ವಿಜಯವು ಕೇವಲ ಒಬ್ಬ ಉದ್ಯಮಿಯ ಯಶಸ್ಸಿನ ಕಥೆಯಲ್ಲ; ಇದು ಅಸಹಾಯಕತೆಯಿಂದ ಆತ್ಮವಿಶ್ವಾಸದತ್ತ, ಬಡತನದಿಂದ ಸಮೃದ್ಧಿಯತ್ತ ಮತ್ತು ಮೌನದಿಂದ ಕ್ರಾಂತಿಯತ್ತ ಸಾಗಿದ ಹಠವಾದಿ ಮನಸ್ಸಿನ ವ್ಯಕ್ತಿಯ ಯಶೋಗಾಥೆಯಾಗಿದೆ ಎಂದು ಕಾರ್ಯಕ್ರಮ ನಿರೂಪಕರು ಹೇಳುತ್ತಿರುವಾಗ ಸಭಾಂಗಣವು ಕಿಕ್ಕಿರಿದು ತುಂಬಿತ್ತು. ವೇದಿಕೆಯ ಮೇಲೆ ನಿಂತಿದ್ದ ಉದ್ಯಮಿ ಪ್ರಕಾಶ್‌ನ ಕೈಯಲ್ಲಿ ಫಳಫಳನೆ ಹೊಳೆಯುವ ಜೀವಮಾನದ ಸಾಧನೆ ಪ್ರಶಸ್ತಿಯಿತ್ತು. ಕ್ಯಾಮೆರಾಗಳ ಫ್ಲ್ಯಾಶ್ ಬೆಳಕು ಕಣ್ಣು ಕೋರೈಸುತ್ತಿತ್ತು. ಚಪ್ಪಾಳೆಗಳ ಶಬ್ದ ಆತನ ಕಿವಿಗೆ ಅಸ್ಪಷ್ಟವಾಗಿ ಕೇಳಿಸುತ್ತಿತ್ತು. ಆದರೆ, ಆ ಕ್ಷಣ ಪ್ರಕಾಶನ ಮನಸ್ಸು ಚದುರಿದ ವಸ್ತುಗಳ ಹಾಗೆ ಇದ್ದು, ವರ್ತಮಾನದಲ್ಲಿರಲಿಲ್ಲ; ಅದು ಕಾಲದ ಚಕ್ರವನ್ನು ಹಿಂದಕ್ಕೆ ತಿರುಗಿಸಿ ಆ ಸಾವಿರ ನೆನಪುಗಳ ಮಡಿಲಿಗೆ ಓಡಿಹೋಗಿತ್ತು.




**ಹರಿದ ಚಪ್ಪಲಿ – ಛಲದ ಹಾದಿ:** ಪ್ರಕಾಶನಿಗೆ ನೆನಪಾಯಿತು. ಇದೇ ಬೆಂಗಳೂರು ನಗರಕ್ಕೆ ಹರಿದ ಚಪ್ಪಲಿ ಹಾಕಿಕೊಂಡು ಕೆಲಸ ಹುಡುಕುತ್ತಾ ಬಂದಿದ್ದ ಆ ಮಳೆಯ ಸಂಜೆ. ಹೊಟ್ಟೆಯಲ್ಲಿ ಹಸಿವಿನ ಕಿಚ್ಚು, ಕೈಯಲ್ಲಿ ಕೇವಲ ಹತ್ತು ರೂಪಾಯಿ. ಅಂದು ಪಾದಚಾರಿ ರಸ್ತೆಯ ಮೇಲೆ ಕುಳಿತು ಬರೆದಿದ್ದ ಆ ಮೊದಲ ಕನಸಿನ ನಕ್ಷೆ ಇಂದು ನನಸಾಗಿತ್ತು. ಆ ಹಸಿವು ಅವನಿಗೆ ಕಲಿಸಿದ ಪಾಠ ಇನ್ಯಾವ ವಿಶ್ವವಿದ್ಯಾಲಯವೂ ಕಲಿಸಿರಲಿಲ್ಲ. ಪ್ರಕಾಶನಿಗೆ ಒಂದು ಸತ್ಯ ದರ್ಶನವಾಯಿತು. ನಗರದ ಫುಟ್‌ಪಾತ್ ಮೇಲೆ ಮಲಗಿದ್ದಾಗ ಅವನಿಗೆ ಅರ್ಥವಾಗಿದ್ದು ಬಡತನ ಎನ್ನುವುದು ಶಾಪವಲ್ಲ, ಅದು ಮನುಷ್ಯನ ತಾಳ್ಮೆಯನ್ನು ಪರೀಕ್ಷಿಸುವ ಒಂದು ಅಗ್ನಿಪರೀಕ್ಷೆ. ಆತ ಹಸಿವಿನಿಂದ ಕಂಗೆಟ್ಟಾಗ ಹೋಟೆಲ್ ಒಂದರ ಮುಂದೆ ನಿಂತು ದೋಸೆಯ ವಾಸನೆಯನ್ನು ಆಸ್ವಾದಿಸುತ್ತಿದ್ದ ದಿನಗಳಿದ್ದವು. ಆ ವಾಸನೆಯೇ ಅವನಿಗೆ ಒಂದು ದಿನ ನಾನು ಈ ನಗರದ ಹಸಿವನ್ನು ನೀಗಿಸುವವನಾಗಬೇಕು ಎಂಬ ಛಲವನ್ನು ಪ್ರೇರೇಪಿಸಿತು. ಪ್ರಕಾಶನಿಗೆ ಅವಮಾನಗಳ ಸಾಲು ತೀರದಾಗಿತ್ತು. ನಿನಗೆ ಇದು ಸಾಧ್ಯವಿಲ್ಲ ಎಂದು ಮುಖಕ್ಕೆ ಹೊಡೆದಂತೆ ಹೇಳಿದವರ ಮುಖಗಳು ಒಂದೊಂದಾಗಿ ಕಣ್ಣ ಮುಂದೆ ಸುಳಿದವು. ಬಂಡವಾಳವಿಲ್ಲದೆ ಹೋದಾಗ ಬಾಗಿಲು ಮುಚ್ಚಿದ ಬ್ಯಾಂಕುಗಳು, ಹಾಸ್ಯ ಮಾಡಿದ ಸ್ನೇಹಿತರು, ಆ ಪ್ರತಿಯೊಂದು ಅವಮಾನವೂ ಅವನ ಪಾಲಿಗೆ ಉರಿಯುವ ಕೆಂಡವಾಗಿರಲಿಲ್ಲ, ಬದಲಾಗಿ ಗುರಿ ತಲುಪಲು ಬೇಕಾದ ಇಂಧನವಾಗಿತ್ತು. ಪ್ರಕಾಶ ತನ್ನ ಮೊದಲ ಪ್ರಾಜೆಕ್ಟ್ ಹಿಡಿದು ಹೂಡಿಕೆದಾರರ ಬಳಿ ಹೋದಾಗ ಅವನನ್ನು ಕೇವಲ ಹೊರಹಾಕಲಿಲ್ಲ, ಬದಲಾಗಿ ಅವನ ಹಳ್ಳಿಯ ಭಾಷೆ ಮತ್ತು ವೇಷಭೂಷಣವನ್ನು ನೋಡಿ ಅಪಹಾಸ್ಯ ಮಾಡಿದರು. ಅಂದು ಆತ ಕಣ್ಣೀರು ಹಾಕುತ್ತಾ ಶೌಚಾಲಯದಲ್ಲಿ ಮುಖ ತೊಳೆದುಕೊಳ್ಳುವಾಗ ಕನ್ನಡಿಯ ಮುಂದೆ ನಿಂತು ಅಂದುಕೊಂಡ. ಭಾಷೆ ಸಂವಹನಕ್ಕಷ್ಟೇ ಹೊರತು, ಬುದ್ಧಿವಂತಿಕೆಗಲ್ಲ. ನನ್ನ ಕೆಲಸವೇ ಇವರಿಗೆ ಉತ್ತರ ನೀಡಬೇಕು. ಅಂದಿನಿಂದ ಆತ ಮಾತನಾಡುವುದನ್ನು ಕಡಿಮೆ ಮಾಡಿ, ಕೆಲಸದ ವೇಗವನ್ನು ಹೆಚ್ಚಿಸಿದ. ಯಾರು ನಿನ್ನ ಮೇಲೆ ಕಲ್ಲು ಎಸೆಯುತ್ತಾರೋ, ಆ ಕಲ್ಲುಗಳನ್ನು ಬಳಸಿ ನಿನ್ನ ಸಾಮ್ರಾಜ್ಯವನ್ನು ಕಟ್ಟು. ಈ ಮಾತನ್ನು ಪ್ರಕಾಶ್ ಅಕ್ಷರಶಃ ಪಾಲಿಸಿದ್ದ. ಸಾಧನೆಯ ಶಿಖರ ಏರುವಾಗ ಎದುರಾದ ಒಂಟಿತನ ಅತೀ ದೊಡ್ಡ ನೆನಪು. ರಾತ್ರಿಯಿಡೀ ಕಚೇರಿಯ ಮೇಜಿನ ಮೇಲೆ ತಲೆಯಿಟ್ಟು ಮಲಗಿದ ದಿನಗಳು, ಹಬ್ಬದ ಸಂಭ್ರಮದಲ್ಲಿ ಮನೆಯವರ ಜೊತೆಗಿರಲಾಗದ ಆ ನೋವು... ಇವೆಲ್ಲವೂ ಇಂದು ಆ ಪ್ರಶಸ್ತಿಯ ಹೊಳಪಿನಲ್ಲಿ ಮರೆಯಾಗಿದ್ದವು. ಪ್ರಕಾಶ ತನ್ನ ಗೆಳೆಯರೆಲ್ಲರೂ ಮದುವೆ, ಪಾರ್ಟಿ ಎಂದು ಸಂಭ್ರಮಿಸುತ್ತಿದ್ದಾಗ ತಾನು ಮಾತ್ರ ಕತ್ತಲೆ ಕೋಣೆಯಲ್ಲಿ ಕಂಪ್ಯೂಟರ್ ಮುಂದೆ ಕುಳಿತಿರುತ್ತಿದ್ದ. ಆ ಸಮಯದಲ್ಲಿ ಕಾಡುವ ಒಂಟಿತನ ಭಯಾನಕವಾಗಿತ್ತು. ಆತ ತನ್ನ ಡೈರಿಯಲ್ಲಿ ಬರೆದುಕೊಂಡಿದ್ದ ಶಿಖರ ಏರುವವನು ಯಾವಾಗಲೂ ಒಂಟಿಯಾಗಿಯೇ ಇರುತ್ತಾನೆ, ಆದರೆ ಅಲ್ಲಿಂದ ಕಾಣುವ ಜಗತ್ತು ಅದ್ಭುತವಾಗಿರುತ್ತದೆ. ಈ ಒಂಟಿತನವೇ ಆತನಿಗೆ ತನ್ನನ್ನು ತಾನು ಅರಿಯಲು ಮತ್ತು ಹೊಸ ಆವಿಷ್ಕಾರಗಳ ಬಗ್ಗೆ ಯೋಚಿಸಲು ಮೌನವಾದ ವೇದಿಕೆಯಾಯಿತು. ತನ್ನ ಬೆನ್ನ ಹಿಂದೆ ನಿಂತು ನಿನಗೆ ಸಾಧ್ಯವಿದೆ ಎಂದು ಬೆನ್ನುತಟ್ಟಿದ ಆ ತಾಯಿಯ ಸವಕಲು ಸೀರೆಯ ನೆನಪು ಅವನ ಕಣ್ಣಂಚಿನಲ್ಲಿ ನೀರು ತರಿಸಿತು. ಮೈಕ್ ಹಿಡಿದ ಪ್ರಕಾಶ್ ಗದ್ಗದಿತ ಧ್ವನಿಯಲ್ಲಿ ಹೇಳಿದ: ಈ ಪ್ರಶಸ್ತಿ ಕೇವಲ ನನ್ನ ಇಂದಿನ ಯಶಸ್ಸಿನದ್ದಲ್ಲ. ಇದರ ಹಿಂದೆ ಸಾವಿರಾರು ಸೋಲುಗಳಿವೆ, ಲಕ್ಷಾಂತರ ಅವಮಾನಗಳಿವೆ ಮತ್ತು ಕೋಟ್ಯಂತರ ಹನಿ ಬೆವರಿನ ನೆನಪುಗಳಿವೆ. ಸಾಧಕನಿಗೆ ವಿಜಯದ ಪತಾಕೆಗಿಂತ, ಆ ಪತಾಕೆ ಹಿಡಿಯಲು ಬೆಳೆಸಿಕೊಂಡ ಛಲದ ನೆನಪುಗಳೇ ಅತಿ ದೊಡ್ಡ ಆಸ್ತಿ. ಸಭಾಂಗಣದಲ್ಲಿ ಮತ್ತೆ ಚಪ್ಪಾಳೆ ಮೊಳಗಿತು. ಸಿದ್ಧಾರ್ಥನ ಪಾಲಿಗೆ ಆ ಸಾವಿರ ನೆನಪುಗಳು ಇಂದು ಒಂದು ಸುಂದರ ಕಾವ್ಯವಾಗಿ ಮಾರ್ಪಟ್ಟಿದ್ದವು. ಪ್ರಕಾಶನ ಬದುಕು ಒಂದು ಬಿದಿರಿನ ಸಸಿಯಂತಾಗಿತ್ತು. ಬಿದಿರು ಮೊದಲ ಐದು ವರ್ಷ ಮಣ್ಣಿನ ಅಡಿಯಲ್ಲಿ ಬೇರೂರುತ್ತಾ ಹೊರಜಗತ್ತಿಗೆ ಕಾಣದಂತೆ ಮೌನವಾಗಿ ಬೆಳೆಯುತ್ತದೆ. ಜನರು ಅದನ್ನು ಸತ್ತ ಸಸಿ ಎಂದು ಹೀಯಾಳಿಸಬಹುದು. ಆದರೆ, ಒಮ್ಮೆ ಅದು ಮಣ್ಣಿನ ಪದರ ಸೀಳಿ ಹೊರಬಂದ ಮೇಲೆ ಕೇವಲ ಕೆಲವೇ ವಾರಗಳಲ್ಲಿ ಆಕಾಶದ ಎತ್ತರಕ್ಕೆ ಜಿಗಿಯುತ್ತದೆ. ಪ್ರಕಾಶನ ಪ್ರಯತ್ನಗಳೂ ಅಷ್ಟೇ; ಯಾರಿಗೂ ಕಾಣದಂತೆ ಆತ ತನ್ನ ಜ್ಞಾನದ ಬೇರುಗಳನ್ನು ಗಟ್ಟಿಗೊಳಿಸಿಕೊಳ್ಳುತ್ತಿದ್ದ. ಆತ ಅನುಭವಿಸಿದ ಅವಮಾನಗಳು ಆ ಬೇರಿಗೆ ಹಾಕಿದ ಗೊಬ್ಬರದಂತಿದ್ದವು.

**ಉಕ್ಕು ಮತ್ತು ಬೆಂಕಿಯ ಒಡನಾಟ:** ಜೀವನವು ಅವನನ್ನು ಒಬ್ಬ ಕಮ್ಮಾರನಂತೆ ಹದ ಮಾಡುತ್ತಿತ್ತು. ಕಬ್ಬಿಣವು ಕೇವಲ ಮಣ್ಣಿನಲ್ಲಿ ಬಿದ್ದಿದ್ದರೆ ಅದಕ್ಕೆ ಬೆಲೆ ಇಲ್ಲ. ಆದರೆ, ಅದು ಕೆಂಡದಂತಹ ಬೆಂಕಿಯಲ್ಲಿ ಬೆಂದು, ಸುತ್ತಿಗೆಯ ಏಟುಗಳನ್ನು ಸದ್ದಿಲ್ಲದೆ ಸಹಿಸಿಕೊಂಡಾಗ ಮಾತ್ರ ಒಂದು ಹರಿತವಾದ ಖಡ್ಗವಾಗಲು ಸಾಧ್ಯ. ಪ್ರಕಾಶನಿಗೆ ಎದುರಾದ ಆರ್ಥಿಕ ಸಂಕಷ್ಟಗಳು ಆ ಕೆಂಡದಂತೆ ಇದ್ದವು. ಸಮಾಜದ ಟೀಕೆಗಳು ಸುತ್ತಿಗೆಯ ಏಟಿನಂತೆ ಇದ್ದವು. ಈಗ ವೇದಿಕೆಯ ಮೇಲೆ ಆತ ಹೊಳೆಯುತ್ತಿರುವುದು ಆ ಖಡ್ಗದ ತೀಕ್ಷ್ಣತೆಯಂತೆ; ಅಂದು ಬೆಂಕಿಯಲ್ಲಿ ಬೆಂದಿದ್ದಕ್ಕೇ ಇಂದು ಈ ಹೊಳಪು ಬಂದಿತ್ತು. ಆತನ ಉದ್ಯಮದ ಹಾದಿ ಒಂದು ಬೆಟ್ಟದ ನದಿಯಂತೆ ಸಾಗಿತ್ತು. ನದಿಯ ಹಾದಿಯಲ್ಲಿ ಬಂಡೆಗಳು ಎದುರಾದಾಗ ನದಿ ಹರಿಯುವುದನ್ನು ನಿಲ್ಲಿಸುವುದಿಲ್ಲ; ಬದಲಾಗಿ ತನ್ನ ಹಾದಿಯನ್ನು ಬದಲಿಸಿಕೊಳ್ಳುತ್ತದೆ ಅಥವಾ ಆ ಕಲ್ಲಿನ ಮೇಲೆಯೇ ಹರಿದು ಅದನ್ನು ನಯಗೊಳಿಸುತ್ತದೆ. ಪ್ರಕಾಶನಿಗೆ ಮಾರುಕಟ್ಟೆಯಲ್ಲಿ ಎದುರಾದ ಪೈಪೋಟಿಗಳು ಆ ಬಂಡೆಗಳಂತೆ ಇದ್ದವು. ಆತ ಅವನ್ನು ಎದುರಿಸುವ ಬದಲು ತನ್ನ ಕೌಶಲದಿಂದ ಅವುಗಳ ಮೇಲೆಯೇ ಸವಾರಿ ಮಾಡಿದ್ದ. ಸಮುದ್ರ ಸೇರುವ ಹಂಬಲವಿರುವ ನದಿಗೆ ಸಣ್ಣ ಹಳ್ಳಗಳ ಅಡೆತಡೆ ಲೆಕ್ಕಕ್ಕಿಲ್ಲವಷ್ಟೇ? ಕೊನೆಯದಾಗಿ, ಪ್ರಕಾಶನಿಗೆ ತನ್ನ ಬದುಕು ಒಬ್ಬ ಶಿಲ್ಪಿಯ ಕಲಾಕೃತಿಯಂತೆ ಕಂಡಿತು. ಕಲ್ಲಿನಲ್ಲಿ ದೇವರಿರುತ್ತಾನೆ, ಆದರೆ ಆ ದೇವರನ್ನು ಹೊರತರಲು ಅನಗತ್ಯವಾದ ಭಾಗಗಳನ್ನು ಉಳಿ ಮತ್ತು ಸುತ್ತಿಗೆಯಿಂದ ಕೆತ್ತಿ ತೆಗೆಯಬೇಕು. ಆತನ ಸೋಲುಗಳು ಆ ಉಳಿಯ ಪೆಟ್ಟುಗಳಂತಿದ್ದವು. ಆತನೊಳಗಿದ್ದ ಅಹಂಕಾರ, ಭಯ ಮತ್ತು ಆಲಸ್ಯ ಎಂಬ ಅನಗತ್ಯ ಕಲ್ಲಿನ ಭಾಗಗಳನ್ನು ಈ ನೋವಿನ ನೆನಪುಗಳು ಕೆತ್ತಿ ತೆಗೆದಿದ್ದವು. ಈಗ ವೇದಿಕೆಯ ಮೇಲೆ ನಿಂತಿರುವುದು ಬರಿ ಪ್ರಕಾಶನಲ್ಲ, ಬದಲಾಗಿ ಜೀವನ ಎಂಬ ಶಿಲ್ಪಿ ಕೆತ್ತಿದ ಒಂದು ಪರಿಪೂರ್ಣ ವಿಗ್ರಹವಾಗಿದ್ದಾನೆ. ಒಬ್ಬ ಸಾಧಕನಿಗೆ ಯಶಸ್ಸು ಎಂಬುದು ಆಕಾಶದಿಂದ ಬಿದ್ದ ನಕ್ಷತ್ರವಲ್ಲ; ಅದು ಆತ ತನ್ನ ಬೆವರಿನಿಂದ ಪೋಷಿಸಿದ ಒಂದು ಹೆಮ್ಮರ. ಪ್ರಕಾಶನ ಈ ಸಾವಿರ ನೆನಪುಗಳು ಕೇವಲ ಘಟನೆಗಳಲ್ಲ, ಅವು ಆತನನ್ನು ರೂಪಿಸಿದ ಹೋಲಿಕೆಗಳ ಮಹಾಕಾವ್ಯವಾಗಿದೆ.

**ತಾಯಿಯ ಹರಿದ ಹಳೆಯ ಬ್ಯಾಗು:** ಪ್ರಕಾಶನ ನೆನಪುಗಳ ಸುರುಳಿ ಈಗ ಬಿಚ್ಚಿಕೊಳ್ಳುತ್ತಾ ಹೋಯಿತು. ಅದು ಪ್ರಶಸ್ತಿಯ ಭಾರಕ್ಕಿಂತಲೂ ಹೆಚ್ಚಾಗಿತ್ತು ಮತ್ತು ಆ ವಿಜಯದ ಹಾದಿಯಲ್ಲಿ ಮನಸ್ಸನ್ನು ಹದಗೊಳಿಸಿದ ಆ ಕೆಲವು ಮನ ಮಿಡಿಯುವ ಘಟನೆಗಳು ಅವನ ಕಣ್ಣಮುಂದೆ ಜೀವಂತವಾದವು. ಪ್ರಕಾಶನಿಗೆ ಅಂದು ಮೊದಲ ಬಾರಿಗೆ ವಿದೇಶಕ್ಕೆ ಹೋಗುವ ಅವಕಾಶ ಸಿಕ್ಕಾಗ, ಅವನ ಬಳಿ ಒಂದು ಸೂಟ್‌ಕೇಸ್ ಕೂಡ ಇರಲಿಲ್ಲ. ತಾಯಿ ತಾನು ಕಾಪಿಟ್ಟಿದ್ದ ಹಳೆಯದೊಂದು ಬಟ್ಟೆ ಚೀಲವನ್ನು ತಂದುಕೊಟ್ಟಿದ್ದಳು. ಅದರಲ್ಲಿ ಬೆವರ ವಾಸನೆಗಿಂತ ಹೆಚ್ಚಾಗಿ ನಂಬಿಕೆಯ ಸುವಾಸನೆಯಿತ್ತು. ಅವನು ವಿಮಾನ ನಿಲ್ದಾಣದ ಭವ್ಯ ಕಟ್ಟಡದಲ್ಲಿ ಆ ಬಣ್ಣಗೆಟ್ಟ ಬ್ಯಾಗನ್ನು ಹಿಡಿದು ನಿಂತಾಗ ಎಲ್ಲರೂ ಆತನನ್ನು ನೋಡಿ ನಕ್ಕಿದ್ದರು. ಆದರೆ ಆ ಬ್ಯಾಗಿನ ಒಳಗಿನ ಒಂದು ಸಣ್ಣ ಜೇಬಿನಲ್ಲಿ ಅವನ ತಾಯಿ ಕೈಬರಹದಲ್ಲಿ ಬರೆದ ಚೀಟಿಯಿತ್ತು: ಮಗನೇ, ಮನುಷ್ಯ ಎತ್ತರಕ್ಕೆ ಹೋದಷ್ಟೂ ನೆರಳು ನೆಲದ ಮೇಲಿರಲಿ. ಆ ಬ್ಯಾಗು ಅವನಿಗೆ ಕೇವಲ ವಸ್ತುವಾಗಿರಲಿಲ್ಲ; ಅದು ಸಂಸ್ಕಾರದ ಭಾಗವಾಗಿತ್ತು. ಇಂದು ದುಬಾರಿ ಕಾರುಗಳಲ್ಲಿ ಓಡಾಡುವಾಗಲೂ ಆ ಹಳೆಯ ಬ್ಯಾಗನ್ನು ಅವನು ತನ್ನ ಕೋಣೆಯ ಅತ್ಯಂತ ಸುಂದರ ಜಾಗದಲ್ಲಿಟ್ಟಿದ್ದಾನೆ. ಬಹಳ ವರ್ಷಗಳ ಹಿಂದೆ, ಉದ್ಯಮದಲ್ಲಿ ಸಂಪೂರ್ಣವಾಗಿ ಕುಸಿದು ಹೋಗಿದ್ದ ಆ ಕರಾಳ ದಿನ. ಪ್ರಕಾಶನಿಗೆ ಅಂದು ಊಟಕ್ಕೂ ಸಂಚಕಾರ ಬಂದಿತ್ತು. ಬೆಂಗಳೂರಿನ ಮೆಜೆಸ್ಟಿಕ್ ರೈಲು ನಿಲ್ದಾಣದ ಪಕ್ಕದ ಬೆಂಚಿನ ಮೇಲೆ ಕುಳಿತಿದ್ದಾಗ, ಅವನ ಸ್ಥಿತಿಯನ್ನು ಕಂಡ ಪಕ್ಕದ ಭಿಕ್ಷುಕ ತನ್ನ ಹತ್ತಿರವಿದ್ದ ಅರ್ಧ ಒಣಗಿದ ರೊಟ್ಟಿಯನ್ನು ಅವನ ಮುಂದಿಟ್ಟು, ತಗೋಳಿ ಸಾಹೇಬ್ರೆ, ಹೊಟ್ಟೆ ಹಸಿದ್ರೆ ಬುದ್ಧಿ ಕೆಲಸ ಮಾಡಲ್ಲ ಅಂದಿದ್ದ. ಒಬ್ಬ ಭಿಕ್ಷುಕನ ಆ ಅರ್ಧ ರೊಟ್ಟಿ ಅವನಿಗೆ ಅಂದು ಪಂಚಪ್ರಾಣಗಳ ಶಕ್ತಿಯನ್ನು ನೀಡಿತ್ತು. ಆ ದಿನ ಪ್ರಕಾಶ ಒಂದು ಸಂಕಲ್ಪ ಮಾಡಿದ್ದನಾನು ಗೆಲ್ಲುವುದು ನನಗಾಗಿ ಮಾತ್ರವಲ್ಲ, ನನ್ನಂತೆ ಹಸಿದಿರುವ ಹತ್ತಾರು ಹೊಟ್ಟೆಗಳನ್ನು ತುಂಬಿಸುವುದಕ್ಕಾಗಿ. ಆ ಭಿಕ್ಷುಕನ ಕಣ್ಣಲ್ಲಿದ್ದ ಆ ಸಾತ್ವಿಕ ಕರುಣೆ ಪ್ರಕಾಶನ ಸಾವಿರ ನೆನಪುಗಳ ಪಟ್ಟಿಯಲ್ಲಿ ಇಂದಿಗೂ ಅಗ್ರಸ್ಥಾನ ದಲ್ಲಿದೆ. ಇನ್ನೊಂದು ಘಟನೆ ಅವನ ಕಣ್ಣಾಲಿಗಳನ್ನು ಒದ್ದೆ ಮಾಡಿತು. ಪ್ರಕಾಶನ ಉದ್ಯಮದ ಏರುಪೇರಿನಲ್ಲಿ ಅವನು ತನ್ನ ಮಗಳ ಹುಟ್ಟುಹಬ್ಬವನ್ನೂ ಮರೆತಿದ್ದ ಸ'ವ'ು'ಯ'ುವ'ದ'ು. ಮಗಳಿಗೆ ಹೊಸ ಬಟ್ಟೆ ಕೊಡಿಸಲೂ ಹಣವಿರಲಿಲ್ಲ. ಆದರೆ, ಅಂದು ಸಾಯಂಕಾಲ ಮನೆಗೆ ಹೋದಾಗ ಮಗಳು ತನ್ನ ಮಣ್ಣಿನ ಹುಂಡಿಯನ್ನು ಒಡೆದು, ಅದರಲ್ಲಿ ಸಿಕ್ಕ ಹತ್ತಾರು ರೂಪಾಯಿಗಳನ್ನು ಆತನ ಕೈಗಿಟ್ಟು, ಅಪ್ಪಾ, ನೀನು ಸೋತಿದ್ದೀಯ ಅಂತ ಅಮ್ಮ ಅಳ್ತಿದ್ದಳು... ಈ ಕಾಸು ತಗೋ, ಇದರಲ್ಲಿ ಹೊಸ ಕಂಪನಿ ಶುರು ಮಾಡು ಎಂದಿದ್ದಳು. ಆ ಎಳೆಯ ಮಗುವಿನ ಮಾತುಗಳು ಅವನಿಗೆ ಸಾವಿರ ಕೋಟಿ ಬಂಡವಾಳಕ್ಕಿಂತ ದೊಡ್ಡದಾಗಿ ಕಂಡವು. ಮಗುವಿನ ಆ ನಂಬಿಕೆಯೇ ಅವನನ್ನು ಇಂದು ಈ ಉನ್ನತ ಸ್ಥಾನಕ್ಕೆ ತಂದು ನಿಲ್ಲಿಸಿದೆ. ಪ್ರಕಾಶ ಮೈಕ್ ಮುಂದೆ ನಿಂತು ತನ್ನ ಮಾತು ಮುಗಿಸುತ್ತಾ ಹೀಗೆಂದ : ನನ್ನ ಈ ದಿಗ್ವಿಜಯ ಕೇವಲ ನನ್ನ ಸಾಮರ್ಥ್ಯವಲ್ಲ. ಇದು ನನ್ನ ತಾಯಿಯ ಹರಿದ ಬ್ಯಾಗು, ಆ ಭಿಕ್ಷುಕನ ಅರ್ಧ ರೊಟ್ಟಿ ಮತ್ತು ನನ್ನ ಮಗಳ ಆ ಪುಟ್ಟ ಹುಂಡಿಯ ಹಣದ ಮೊತ್ತ. ಈ ಮನುಷ್ಯತ್ವದ ಸಣ್ಣ ಸಣ್ಣ ಘಟನೆಗಳೇ ನನ್ನನ್ನು ಒಬ್ಬ ಸಾಧಕನನ್ನಾಗಿ ಮಾಡಿದ್ದು. ಇಡೀ ಸಭಾಂಗಣ ಮೌನವಾಯಿತು. ಅನೇಕರ ಕಣ್ಣುಗಳಲ್ಲಿ ನೀರಿತ್ತು. ಯಾಕೆಂದರೆ ಪ್ರಕಾಶ ಅಲ್ಲಿ ಹೇಳುತ್ತಿದ್ದುದು ಕೇವಲ ತನ್ನ ಕಥೆಯನ್ನಲ್ಲ; ಪ್ರತಿಯೊಬ್ಬರ ಬದುಕಿನಲ್ಲೂ ಅಡಗಿರುವ ಆ ಮನ ಮಿಡಿಯುವ ಸಾವಿರ ನೆನಪುಗಳನ್ನು.





**ಸ್ಥಿತಪ್ರಜ್ಞತೆ:** ಪ್ರಕಾಶನ ಬದುಕು ಈಗ ಕೇವಲ ಒಂದು ಹಳ್ಳಿಯ ಕಥೆಯಾಗಿ ಉಳಿದಿರಲಿಲ್ಲ. ಅದು ಜಾಗತಿಕ ಭೂಪಟದಲ್ಲಿ ಅಳಿಸಲಾಗದ ಹೆಜ್ಜೆಗುರುತನ್ನು ಮೂಡಿಸಿದ ದಿಗ್ವಿಜಯ ಸಾಮ್ರಾಜ್ಯದ ಕಥೆಯಾಗಿತ್ತು. ಒಬ್ಬ ಸಾಮಾನ್ಯ ಯುವಕ ಇಂದು ಸಾವಿರಾರು ಕೋಟಿ ರೂಪಾಯಿಗಳ ವಹಿವಾಟು ನಡೆಸುವ, ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದ ಗ್ಲೋಬಲ್ ಐಕಾನ್ ಆಗಿ ಬೆಳೆದು ನಿಂತಿದ್ದನು. ಪ್ರಕಾಶ್ ಕೇವಲ ಅಪ್ಲಿಕೇಶನ್ ತಯಾರಕನಾಗಿ ಉಳಿಯಲಿಲ್ಲ. ಆತ ಫಾರ್ಮ್-ಟು-ಫೋರ್ಕ್ (Farm-to-Fork) ಎಂಬ ಬೃಹತ್ ಉದ್ಯಮ ಜಾಲವನ್ನು ನಿರ್ಮಿಸಿದ. ರೈತನ ಹೊಲದಿಂದ ಹಿಡಿದು ಅಮೆರಿಕದ ಸೂಪರ್ ಮಾರ್ಕೆಟ್‌ಗಳವರೆಗೆ ಅವನ ಕಂಪನಿಯ ಮುದ್ರೆ ಇತ್ತು. ಅವನು ಕೇವಲ ಒಂದು ನದಿಯಾಗಲಿಲ್ಲ, ಬದಲಾಗಿ ಹತ್ತಾರು ಉಪನದಿಗಳನ್ನು ಸೇರಿಸಿಕೊಂಡು ಹರಿಯುವ ಮಹಾಸಾಗರವಾಗಿದ್ದನು. ಉದ್ಯಮಿಯಾಗಿ ಬೆಳೆಯುವ ಹಾದಿಯಲ್ಲಿ ಅವನು ಎದುರಿಸಿದ ಅತಿದೊಡ್ಡ ಸವಾಲು ನೈತಿಕತೆ. ಉದ್ಯಮ ಸಾಮ್ರಾಜ್ಯ ಬೆಳೆಯುತ್ತಿದ್ದಂತೆ, ಪ್ರಕಾಶನ ಮುಂದೆ ಭ್ರಷ್ಟಾಚಾರದ ದಾರಿಗಳು ತೆರೆದುಕೊಂಡವು. ಲಾಭವನ್ನು ದುಪ್ಪಟ್ಟು ಮಾಡಲು ಕಲಬೆರಕೆ ಅಥವಾ ಮೋಸದ ಹಾದಿ ಸುಲಭವಾಗಿತ್ತು. ಆದರೆ ಪ್ರಕಾಶ್ ಈ ಸಂದರ್ಭದಲ್ಲಿ ಒಂದು ದೃಢನಿರ್ಧಾರ ಮಾಡಿ ತನ್ನ ಬೋರ್ಡ್ ಮೀಟಿಂಗ್‌ನಲ್ಲಿ ಘೋಷಿಸಿದನು. ನಮ್ಮ ಕಂಪನಿಯ ಲಾಭದ ಪ್ರತಿ ರ'ೂಪಾ'ಯಿ'ಯ'ಲ್ಲೂ ರೈತನ ಬೆವರ ಹನಿ ಮತ್ತು ಗ್ರಾಹಕನ ನಂಬಿಕೆ ಇರಬೇಕು. ಮೌಲ್ಯಗಳನ್ನು ಮಾರಿ ಮಾಡುವ ವ್ಯಾಪಾರಕ್ಕೆ ನಮ್ಮಲ್ಲಿ ಜಾಗವಿಲ್ಲ. ಈ ದೃಢ ನಿಲುವು ಅವನನ್ನು ಇತರ ಉದ್ಯಮಿಗಳಿಗಿಂತ ಭಿನ್ನವಾಗಿ ಬೆಳೆಸಿತು. ಒಮ್ಮೆ ವಿದೇಶಿ ಕಂಪನಿಯೊಂದು ಅವನ ತಂತ್ರಜ್ಞಾನವನ್ನು ಖರೀದಿಸಲು ಸಾವಿರಾರು ಕೋಟಿ ರೂಪಾಯಿಗಳ ಆಮಿಷವೊಡ್ಡಿತು. ಆದರೆ ಒಂದು ಶರತ್ತು ಆ ತಂತ್ರಜ್ಞಾನ ಭಾರತದ ರೈತರಿಗೆ ಉಚಿತವಾಗಿ ಸಿಗಬಾರದು. ನನ್ನ ದೇಶದ ರೈತನ ಹಸಿವಿನ ಮೇಲೆ ನಾನು ಅರಮನೆ ಕಟ್ಟಲಾರೆ ಇದೊಂದು ರೀತಿಯಲ್ಲಿ ಸಂಕಷ್ಟದ ಸುನಾಮಿ ಹಾಗೆ. 1929–30 ರಲ್ಲಿ ಜಾಗತಿಕ ಆರ್ಥಿಕ ಕುಸಿತದ ಪರಿಣಾಮವಾಗಿ ಆ ಸಮಯದಲ್ಲಿ ಪ್ರಕಾಶನ ಉದ್ಯಮದ ಷೇರುಗಳು ಪಾತಾಳಕ್ಕೆ ಕುಸಿದವು. ವಿರೋಧಿಗಳು ಪ್ರಕಾಶನ ಅಧ್ಯಾಯ ಮುಗಿಯಿತು ಎಂದು ಪತ್ರಿಕೆಗಳಲ್ಲಿ ಬರೆದರು. ಕೃಷಿ ತಂತ್ರಜ್ಞಾನದ ಸಂಶೋಧನೆಯ ಸಮಯದಲ್ಲಿ ಪ್ರಕಾಶನಿಗೆ ಜಾಗತಿಕ ಕಂಪನಿಗಳಿಂದ ಬೆದರಿಕೆಗಳು ಬಂದವು. ಅವನ ಸಂಶೋಧನೆಯನ್ನು ನಾಶಪಡಿಸಲು ಸಂಚು ರೂಪಿಸಿದರು. ಆ ಸಂದರ್ಭದಲ್ಲಿ ಪ್ರಕಾಶನ ನಡೆ ಹಲವು ಕಡೆ ಚಿಂತಾಕ್ರಾಂತವಾಯಿತು. ಆತ ಧೃತಿಗೆಟ್ಟಾಗ ಊರಿಗೆ ಫೋನ್ ಮಾಡಿದರೆ, ತಾಯಿ ಹೇಳುತ್ತಿದ್ದ ಒಂದೇ ಮಾತು: ಮಗನೇ, ಮಣ್ಣನ್ನು ನಂಬಿದವನು ಎಂದು ಕೆಡುವುದಿಲ್ಲ. ನೀನು ಮಾಡುತ್ತಿರುವುದು ಪುಣ್ಯದ ಕೆಲಸ, ಹೆದರಬೇಡ. ಅಮ್ಮನ ಆ ಧೈರ್ಯದ ಮಾತುಗಳು ಅವನಿಗೆ ಸಾವಿರ ಸೆಕ್ಯೂರಿಟಿ ಗಾರ್ಡ್‌ಗಳಿಗಿಂತ ಹೆಚ್ಚಿನ ರಕ್ಷಣೆ ನೀಡುತ್ತಿದ್ದವು. ಆತ ತನ್ನ ಐಷಾರಾಮಿ ಬಂಗಲೆ, ಕಾರುಗಳನ್ನು ಮಾರಿ ಕಾರ್ಮಿಕರ ಸಂಬಳ ನೀಡಿದ. ತನ್ನ ಉದ್ಯೋಗಿಗಳ ಮುಂದೆ ನಿಂತು, ನಾನು ನಿಮ್ಮ ಬಾಸ್ ಅಲ್ಲ, ನಿಮ್ಮ ಜೊತೆ ಕೆಲಸ ಮಾಡುವ ಶ್ರಮಿಕ. ನಾವು ಮತ್ತೆ ಎದ್ದು ನಿಲ್ಲೋಣ ಎಂದಿದ್ದ. ಎಲ್ಲರೂ ಪ್ರಮಾಣಿಕವಾಗಿ ಶ್ರಮಿಸಿದ ಪರಿಣಾಮವಾಗಿ ಮುಂದಿನ ಎರಡೇ ವರ್ಷಗಳಲ್ಲಿ ಅವನ ಕಂಪನಿ ಅತೀ ಹೆಚ್ಚು ಪ್ರಗತಿ ಸಾಧಿಸಿತು. ಅದು ಅವನ ಹಣದ ಶಕ್ತಿಯಲ್ಲ, ಅವನ ಮೇಲೆ ಅವನ ಉದ್ಯೋಗಿಗಳು ಇಟ್ಟಿದ್ದ ನಂಬಿಕೆಯ ಬಂಡವಾಳ ಆಗಿತ್ತು. ಈ ಎಲ್ಲ ಘಟನೆಗಳು ಪ್ರಕಾಶನನ್ನು ಕೇವಲ ಒಬ್ಬ ಶ್ರೀಮಂತ ವ್ಯಕ್ತಿಯನ್ನಾಗಿ ಮಾಡಲಿಲ್ಲ, ಬದಲಾಗಿ ಒಬ್ಬ ಸ್ಥಿತಪ್ರಜ್ಞ ಸಾಧಕನನ್ನಾಗಿ ರೂಪಿಸಿದವು.

**ಮುಂದಿನ ದಿನಗಳಲ್ಲಿ ಪ್ರಕಾಶನ ಸಾಮ್ರಾಜ್ಯದ ಅಡಿಯಲ್ಲಿ:** ಐವತ್ತು ದೇಶಗಳಲ್ಲಿ ವ್ಯಾಪಾರ ವಿಸ್ತರಿಸಿದೆ. ಒಂದು ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ನೇರ ಉದ್ಯೋಗ ಲಭಿಸುವಂತೆ ಮಾಡಿದ. ಪ್ರಕಾಶ್ ಫೌಂಡೇಶನ್ ಮೂಲಕ ಹತ್ತು ಸಾವಿರ ಹಳ್ಳಿಗಳಿಗೆ ಉಚಿತ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯ ಸಿಗುತ್ತಿದೆ. ವೇದಿಕೆಯ ಮೇಲೆ ವಿಶ್ವದ ಅತಿದೊಡ್ಡ ಉದ್ಯಮಿಯಾಗಿ ನಿಂತಿದ್ದ ಪ್ರಕಾಶನಿಗೆ ನೆನಪಾಗಿದ್ದು ಅಂದು ತಾನು ಇಟ್ಟ ಆ ಮೊದಲ ಹೆಜ್ಜೆ. ಆತ ತನ್ನ ಭಾಷಣದ ಕೊನೆಯಲ್ಲಿ ಮೌನವಾಗಿ ತನ್ನ ಕೋಟಿನ ಜೇಬಿನಿಂದ ಒಂದು ಹಳೆಯ ಹತ್ತು ರೂಪಾಯಿಯ ನೋಟನ್ನು ಹೊರತೆಗೆದು ತೋರಿಸಿದ. ಗೆಳೆಯರೇ, ಈ ಹತ್ತು ರೂಪಾಯಿಯ ನೋಟು ನನ್ನ ಮೊದಲ ಸಂಪಾದನೆ. ಅಂದು ನಾನು ಇದನ್ನು ಗಳಿಸಲು ಇಡೀ ದಿನ ಬಿಸಿಲಿನಲ್ಲಿ ಅಲೆದಿದ್ದೆ. ಇಂದು ನನ್ನ ಬಳಿ ಕೋಟಿಗಟ್ಟಲೆ ಹಣವಿರಬಹುದು, ಆದರೆ ಈ ಹತ್ತು ರೂಪಾಯಿ ನನಗೆ ನೀಡುವ ಪರಿಶ್ರಮದ ಕಿಮ್ಮತ್ತು ಬೇರೆ ಯಾವುದೂ ನೀಡಲಾರದು. ಸಾವಿರ ನೆನಪುಗಳ ಈ ಪಯಣದಲ್ಲಿ ನಾನು ಕಲಿತದ್ದು ಇಷ್ಟೇ, ಲಾಭಕ್ಕಾಗಿ ಮಾಡುವವನು ವ್ಯಾಪಾರಿ, ಲೋಕದ ಹಸಿವು ನೀಗಿಸಲು ಮಾಡುವವನು ಉದ್ಯಮಿ. ಸಭಾಂಗಣದ ಗಣ್ಯರು ಎದ್ದು ನಿಂತು ಗೌರವ ಸೂಚಿಸಿದರು. ಪ್ರಕಾಶನ ಕಣ್ಣುಗಳಲ್ಲಿ ವಿಜಯದ ಹಮ್ಮಿಗಿಂತ ಹೆಚ್ಚಾಗಿ, ಕ್ರಮಿಸಿ ಬಂದ ಹಾದಿಯ ಬಗ್ಗೆ ಸಾರ್ಥಕತೆಯಿತ್ತು. ಆ ಸಾವಿರ ನೆನಪುಗಳು ಇಂದು ಒಂದು ಉದ್ಯಮ ಸಾಮ್ರಾಜ್ಯದ ಅಡಿಪಾಯವಾಗಿದ್ದವು. ಒಬ್ಬ ಉದ್ಯಮಿಯ ನಿಜವಾದ ದಿಗ್ವಿಜಯ ಎಂದರೆ ಕೇವಲ ಬ್ಯಾಂಕ್ ಬ್ಯಾಲೆನ್ಸ್ ಅಲ್ಲ, ಆತ ಬದಲಿಸಿದ ಜನರ ಬದುಕು. ಅಂತಿಮವಾಗಿ ಪ್ರಕಾಶ ವೇದಿಕೆಯ ಮೇಲೆ ನಿಂತಾಗ, ಅವನ ಕಣ್ಣ ಮುಂದೆ ಹಾದುಹೋದದ್ದು ಕೇವಲ ವಿಜಯದ ದೃಶ್ಯಗಳಲ್ಲ, ಬದಲಾಗಿ ತಾನು ಅನುಭವಿಸಿದ ಪ್ರತಿಯೊಂದು ನೋವು, ಅವಮಾನ ಮತ್ತು ಹಂಚಿಕೊಂಡ ಪ್ರೀತಿಯ ಸಾವಿರ ನೆನಪುಗಳು.

**– ಕೆ. ಎನ್ . ಚಿದಾನಂದ.** (ನಾನಂಚಿ)ಹಾಸನ


# ಅಮ್ಮನಿಗೆ ಅಂತಿಮ ವಿದಾಯ

ಇನ್ನೊಂದು ನನಗೆ ಬೇಸರವನ್ನು ಉಂಟುಮಾಡಿದ್ದು, ಅಮ್ಮ ತುಂಬಾ ಚೆನ್ನಾಗಿ ಉಪ್ಪಿನಕಾಯಿ ಹಾಕುತ್ತಿದ್ದರು, ಒಂದು ದೊಡ್ಡ ಪಿಂಗಾಣಿ ಜಾಡಿ ಇತ್ತು, ಅದನ್ನು ನೋಡಿ ಅಯ್ಯೋ ಉಪ್ಪಿನ ಕಾಯಿಯ ರೆಸಿಪಿಯನ್ನೇ ನಾವು ಕಲಿಯಲಿಲ್ಲವಲ್ಲಾ ಎಂದು ಬೇಸರವಾಗುತ್ತಿತ್ತು. ತಿಥಿ ಎಲ್ಲಾ ಮುಗಿಸಿ ಹೊರಡುವಾಗ ನನ್ನ ಮನದಲ್ಲಿ ಇದ್ದದ್ದು ಒಂದೇ ಕೊರಗು, ಅಮ್ಮನಿಗೆ ಆಪರೇಷನ್ ಆಗಿ ಮತ್ತು ಕರೋನ ಟೈಮ್‌ನಲ್ಲಿ ಎಲ್ಲಾ ಕಡೆ ಓಡಾಡಲು ಕಷ್ಟವಿದ್ದಾಗ ಅಮ್ಮನನ್ನು ಸರಿಯಾಗಿ ನೋಡಿಕೊಳ್ಳಲಿಲ್ಲವೇನೋ ಎನ್ನುವ ಕೊರಗು ನನ್ನ ಮನದಲ್ಲಿ ಉಳಿದಿತ್ತು, ಕಡೆಯದಾಗಿ ಅಮ್ಮ ಬಳಸುತ್ತಿದ್ದ ಚಪ್ಪಲಿಯನ್ನು ತೆಗೆದುಕೊಂಡು ಬೆಂಗಳೂರಿಗೆ ಬಂದೆ....

ಅಮ್ಮ ಅಮ್ಮ ತೀರಿಕೊಂಡರು ಎಂದು ತಮ್ಮನ ಫೋನು ಬಂದಾಗ, ನಾನು ಗತಕಾಲಕ್ಕೆ ಇಳಿದಿದ್ದೆ. ಮನೆಯಲ್ಲಿ ನಾನು ಚಿಕ್ಕವಳಿರುವಾಗ, ಅಜ್ಜಿಯ ಸಾವನ್ನು ನೋಡಿದ್ದು ಬಿಟ್ಟರೆ ಈಗ ಅಮ್ಮನ ಸಾವನ್ನೇ ನೋಡಿದ್ದು. ಅಮ್ಮನಿಗೆ ಆಗಲೇ 85ರ ಮೇಲಾಗಿತ್ತು. ಅಮ್ಮನ ಹುಟ್ಟಿದ ದಿನಾಂಕ ನಮಗ್ಯಾರಿಗೂ ಗೊತ್ತಿರಲಿಲ್ಲ. ಹುಟ್ಟಿದ ಹಬ್ಬವನ್ನೇ ಯಾವತ್ತೂ ಆಚರಿಸಿರಲಿಲ್ಲ, ನಮ್ಮ ತಂದೆಗೆ ಅವರ ಹುಟ್ಟಿದ ದಿನಾಂಕ ಗೊತ್ತಿತ್ತು. ನಮ್ಮ ತಾಯಿಯ ತಂದೆ ಶಿಕ್ಷಕರಾಗಿದ್ದ ಕಾರಣ, ಅವರು ಅಮ್ಮನ ಹುಟ್ಟಿದ ದಿನಾಂಕವನ್ನು ಬರೆದಿಟ್ಟಿದ್ದರು. ಹಾಗೆ ನೋಡಿದರೆ, ಅಮ್ಮನೇ ಹೆಚ್ಚು ಓದಿರಲಿಲ್ಲ. 2-3ನೇ ಕ್ಲಾಸಿನವರೆಗೂ ಹೋಗಿದ್ದೆ ಎಂದು ಹೇಳುತ್ತಿದ್ದರು.


ಅಮ್ಮ ನೋಡಲು ಬೆಳ್ಳಗೆ ತುಂಬ ಸುಂದರವಾಗಿದ್ದರು, ಶಾಲೆಯಲ್ಲಿ ಯಾರೋ ಒಬ್ಬ ಶಿಕ್ಷಕರು ಅಮ್ಮನನ್ನು ಮದುವೆ ಆಗುತ್ತೀಯಾ? ಎಂದು ಕೇಳುತ್ತಿದ್ದರಂತೆ. ಅಮ್ಮ ಗಾಬರಿ ಮತ್ತು ಸಂಕೋಚದಿಂದ ಶಾಲೆಗೆ ಹೋಗುವುದನ್ನೇ ಬಿಟ್ಟಿದ್ದರಂತೆ. ಮನೆಗೆಲಸ ದನಕರುಗಳನ್ನು ನೋಡಿಕೊಳ್ಳುವುದು ಇಂತಹ ಕೆಲಸಗಳಲ್ಲಿ ಮನೆಯಲಿ ಆರಾಮವಾಗಿದ್ದೆ ಎಂದು ಹೇಳುತ್ತಿದ್ದರು. ನಮ್ಮ ಅಮ್ಮನಿಗೆ ಅವರ ತಂದೆ ದಡ್ಡಿ ನೀನು ಶಾಲೆಗೆ ಹೋಗಲಿಲ್ಲ ಎಂದು ಬಯ್ಯುತ್ತಿದ್ದರಂತೆ. ವಿದೇಶದಲ್ಲಿದ್ದ ಮಗಳಿಗೆ ಇನ್ನೂ ನಾವು ಅಮ್ಮ ತೀರಿಹೋದ ವಿಷಯ ಹೇಳಿರಲಿಲ್ಲ. ಆದರೆ, ತಂಗಿ ಅವಳಿಗೆ ವಿಷಯ ತಿಳಿಸಿಬಿಟ್ಟಿದ್ದಳು. ಮಗಳೇ ಫೋನು ಮಾಡಿಕೊಂಡು ಬಂದಳು. ಆಗ ನಾನು ನೋಡು ನೀನು ಬಂದಾಗ ಅಜ್ಜಿಯನ್ನು ಭೇಟಿ ಮಾಡಿದ್ದು ಎಷ್ಟು ಒಳ್ಳೆಯದಾಯಿತು. ಈವತ್ತು ಅಜ್ಜಿಯೇ ಇಲ್ಲ ಎಂದು ಗದ್ಗದಿತಳಾಗಿ ಹೇಳಿದಾಗ ಅವಳು ಅಳತೊಡಗಿದಳು. ಅಜ್ಜಿ ನೀನು ಬೇಗ ಮಗು ಮಾಡಿಕೋ ನಾನು ಸಾಯುವುದರಲ್ಲಿ ಮಗುವನ್ನು ನೋಡಬಹುದು ಎಂದು ಹೇಳಿದ್ದರಲ್ಲಾ! ಇವತ್ತು ಅಜ್ಜಿಯೇ ಇಲ್ಲ ಎಂದು ನಾನು ಹೇಳಿದಾಗ ಅವಳು ನೊಂದುಕೊಂಡು ಕಣ್ಣೀರು ಹಾಕಿದಳು.

ಇನ್ನು ಊರಿಗೆ ತಲುಪುವ ಹೊತ್ತಿಗೆ ದುಃಖ ಕಡಿಮೆ ಆಗಿ ಮೌನವಾಗಿ ಅಮ್ಮನಿಗೆ ಹಾರ ಹಾಕಿ ಕೈಮುಗಿದೆ. ತಮ್ಮ ಅಮ್ಮ ತೀರಿಕೊಂಡ ಬಗೆಯನ್ನು ಹೇಳುತ್ತಿದ್ದ. ಹಿಂದಿನ ರಾತ್ರಿ ಮಂಚದಿಂದ ಕೆಳಗೆ ಬಿದ್ದುಬಿಟ್ಟಿದ್ದರಂತೆ. ಎಬ್ಬಿಸಿ ಪುನಃ ಮಂಚದ ಮೇಲೆ ಮಲಗಿಸಿದ್ದೆವು, ಬೆಳಿಗ್ಗೆ ತಡವಾಗಿ ಎದ್ದು ಹಸಿವಾಗುತ್ತಿದೆ ಎಂದು ಬ್ರೆಡ್ ತರಿಸಿಕೊಂಡು ಟೀ ಜೊತೆ ತಿಂದು, ತುಂಬಾ ಸುಸ್ತಾಗುತ್ತಿದೆ ಎಂದು ಮಲಗಿದವರು, ಹಾಗೆಯೇ ಮೇಲುಸಿರು ಬಂತಂತೆ, ನೋಡನೋಡುತ್ತಲೇ ತಮ್ಮ ಅಮ್ಮ ಅಮ್ಮ ಎಂದು ಕರೆಯುವಾಗಲೇ ಉಸಿರು ನಿಂತು ಹೋಯಿತಂತೆ. ಪ್ರಾಣ ಹೀಗೂ ಹೋಗುವುದುಂಟೇ! ಅಮ್ಮಾ ಎಂದು ಕರೆಯುವಾಗಲೇ ಹೋಗುತ್ತಿರುವ ಪ್ರಾಣವನ್ನು ಹಿಡಿದಿಡಲು ಆಗುವುದೇ ಎಂದು ನನಗನಿಸಿತು.



ಇದಕ್ಕೂ ಮುಂಚೆ ಹಿಮೋಗ್ಲೋಬಿನ್ ಕಡಿಮೆ ಆಗಿ, ಹೀಗೆಯೇ ನಡೆದು ಹೋಗುತ್ತಿದ್ದವರು ಬಿದ್ದು ಬಿಟ್ಟಿದ್ದರು. ಹಿಪ್‌ನ ಮೂಳೆ ಮುರಿದು ಅದಕ್ಕೆ ಆಪರೇಷನ್ ಆಗಿ, ಸ್ವಲ್ಪ ನಡೆದಾಡುವಂತೆ ಆಗಿದ್ದರು. ನಂತರ ಒಂದು ದಿನ ಲೈಟಾಗಿ ಸ್ಟ್ರೋಕ್ ಆಗಿ ಮಾತು ತೊದಲ ತೊಡಗಿದರು, ಮತ್ತೇ ಆಸ್ಪತ್ರೆಗೆ ಸೇರಿಸಿ ಹಿಮೋಗ್ಲೋಬಿನ್ ಸರಿಯಾಗಲು ಬಹಳ ಬಾರಿ ರಕ್ತ ಕೊಡಿಸಿದ್ದರು, ಸ್ವಲ್ಪ ಆರೋಗ್ಯ ಸುಧಾರಿಸುವವರೆಗೂ ತಂಗಿಯ ಮನೆಯಲ್ಲೇ ಬಹಳ ದಿನ ಇದ್ದರು. ಇದು ಕರೋನ ಮುಂಚಿನ ಕತೆ. ನಂತರ ಕರೋನ ಬಂತು ಆಗ ತಂದೆಯವರಿಗೂ ಕರೋನ ಬಂದಿತ್ತು. ಅವರು ಅಮ್ಮನಿಗಿಂತ ಹತ್ತು ವರ್ಷದೊಡ್ಡವರು, ಆದರೂ ಕರೋನದಿಂದ ಹುಷಾರಾಗಿ ಮನೆಗೆ ಬಂದಿದ್ದರು. ಈ ಎಲ್ಲಾ ಅನಾರೋಗ್ಯದಲ್ಲೂ, ತಂಗಿಯ ಮನೆಯಲ್ಲಿಯೇ ಅಪ್ಪ ಅಮ್ಮ ಇದ್ದರು. ನಾವು ಹೆಣ್ಣು ಮಕ್ಕಳು ಮೂರೂ ಜನರು ಹೋಗಿ ಬಂದು ಅಪ್ಪ ಅಮ್ಮನ್ನು ನೋಡಿಕೊಂಡವು ಆದರೆ, ತಮ್ಮನ ಹೆಂಡತಿ ಗೆಸ್ಟ್ ತರಹ ಒಂದು ದಿನ ಬಂದು ಹೋಗಿದ್ದಳಷ್ಟೇ, ಅಮ್ಮ ಸ್ವಲ್ಪ ಸುಧಾರಿಸಿಕೊಂಡ ನಂತರ ಊರಿಗೆ ಬಂದು ಊರಲ್ಲಿಯೇ ಇದ್ದರು, ಅಡಿಗೆಯನ್ನು ಮಾತ್ರ ಅವರೇ ಮಾಡಬೇಕಿತ್ತು. ತಮ್ಮ ಒಬ್ಬನೇ ನಾವು ನಾಲ್ಕು ಜನ ಅಕ್ಕಂದಿರು, ಸೊಸೆ ಮನೆಯಿಂದ ಬೇರೆ ಹೋಗಿ ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿ ಬೆಂಗಳೂರಿನಲ್ಲೇ ಸೆಟಲ್ ಆಗಿದ್ದರು. ಸೊಸೆ ಬೇರೆ ಹೋಗುವಾಗ ಅಪ್ಪ ಅಮ್ಮ ಅವಳಿಗೆ ತಡೆದಿರಲಿಲ್ಲ, ಆದರೆ, ಅವಳ ಧೋರಣೆ ಹೇಗಿತ್ತು ಎಂದರೆ ಅಪ್ಪ ಅಮ್ಮ ಅನಾರೋಗ್ಯವಾದಾಗ, ನಾನ್ಯಾಕೆ ಅವರನ್ನು ನೋಡಿಕೊಳ್ಳಬೇಕು ಎಂದು ಅವರನ್ನು ಯಾವತ್ತೂ ನೋಡಿಕೊಳ್ಳಲಿಲ್ಲ. ನನ್ನ ಅಪ್ಪ ಇಂಜಿನಿಯರ್ ಆಗಿದ್ದರು, ಪುಣ್ಯಕ್ಕೆ ಅವರಿಗೆ ಪೆನ್ಷನ್ ಬರುತ್ತಿತ್ತು, ಹಣದ ಅವಲಂಬನೆಯೇನೂ ಅವರಿಗೆ ಇರಲಿಲ್ಲ. ಸೊಸೆಯದು ಒಂದೇ ಕಂಡೀಷನ್, ನಾನು ನೋಡಿಕೊಳ್ಳುವುದಿಲ್ಲ ಎಂದು. ಇದೆಲ್ಲಾ ಗೊತ್ತಿದ್ದ ಅಮ್ಮ ಮಗನ ಮನೆಗೆ ಹೋಗಲು ಇಷ್ಟವೇ ಪಡುತ್ತಿರಲಿಲ್ಲ. ನಾನು ಊರಲ್ಲೇ ಸಾಯಬೇಕು, ಒಳ್ಳೆಯ ಮಣ್ಣಲ್ಲಿ ಮಣ್ಣು ಮಾಡಿ ಎಂದು ಹೇಳುತ್ತಿದ್ದರು. ಅಮ್ಮ ಹೀಗ್ಯಾಕೆ ಹೇಳುತ್ತಿದ್ದಾರೆ ಎಂದು ನಾನು ಯೋಚಿಸುತ್ತಿದ್ದೆ, ಸೊಸೆಯ ಕಡೆಯಿಂದ ನಾವು ಹೆಣ್ಣುಮಕ್ಕಳು ಆಡುವಂತಿಲ್ಲ ಅನುಭವಿಸುವಂತಿಲ್ಲ, ಹೋಗಲಿ ಎಂದು ಸಹಿಸಿಕೊಂಡು ಸೊಸೆಯನ್ನು, ಬಂದಿದ್ದೆವು.

ಅಮ್ಮ ತಮ್ಮನ ತೀರಿಕೊಂಡಾಗ ಮಗನನ್ನು ನಮ್ಮ ಕಾರಿನಲ್ಲಿಯೇ ಕರೆದುಕೊಂಡು ಬಂದಿದ್ದೆವು. ಮಾರನೇ ದಿನ ಮಣ್ಣು ಮಾಡಬೇಕಾಗಿದ್ದರಿಂದ ಶವ ಇದ್ದರಾತ್ರಿ ಮನೆಯಲ್ಲಿ ಹರಿಕಥೆ ಹೇಳಿಸುತ್ತಾರೆ, ಮೂರು ನಾಲ್ಕು ಜನ ಕಥೆಗಳನ್ನು, ಬಂದಿದ್ದರು, ಅವರು ಜನಪದ ಕೆಲವು ನೀತಿ ಕಥೆಗಳನ್ನು ಹೇಳುತ್ತಿದ್ದರು. ಅಮ್ಮನನ್ನು ಮಲಗಿಸಿದ್ದಲ್ಲಿ ಹಚ್ಚಿಟ್ಟ ದೀಪ ರಾತ್ರಿಯೆಲ್ಲಾ ಉರಿಸಬೇಕು ಎಂದು ಹೇಳಿದ್ದರು. ಊರಿನಲ್ಲಿ ಇದ್ದ ತಂದೆಯವರ ದಾಯಾದಿಗಳ ಮನೆಯವರೆಲ್ಲರೂ ಬಂದು, ಸ್ವಲ್ಪ ಹೊತ್ತುಕೂತು, ಹರಿಕಥೆಯವರ ಜೊತೆಗೂಡಿ ಭಜನೆ ಮಾಡಿ ಹೋಗುತ್ತಿದ್ದರು. ಸಾವಿನ ಸಂದರ್ಭದಲ್ಲಿ ಎಲ್ಲರೂ ಬಂದು ಹೋಗಿದ್ದು ಒಂದು ರೀತಿ ನನಗೆ ಇಷ್ಟವಾಯಿತು. ಸಾವಲ್ಲಿ ಎಲ್ಲರೂ ಜೊತೆಗೂಡುತ್ತಾರೆಂದು ಆದರೆ ನಿದ್ರೆ ಮಾತ್ರ ನನ್ನ ಕಣ್ಣಿಗೆ ಹತ್ತಿರ ಸುಳಿಯಲಿಲ್ಲ, ಹಾಗೂ ಹೀಗೂ ಬೆಳಗಾದಾಗ, ಮನೆಯಲ್ಲಿ ಶವ ಇರುವಾಗ ಅಡಿಗೆ ಮಾಡುವಂತಿಲ್ಲ ಎಂದು ನಿಯಮ. ಕೆಲವು ನಿಯಮಗಳು ನಿಜಕ್ಕೂ ಒಳ್ಳೆಯದಾಗಿರುತ್ತದೆ. ಶವ ಇಟ್ಟುಕೊಂಡು ಅಡಿಗೆ ಮಾಡಲು ಹೇಗೆ ಸಾಧ್ಯ. ದಾಯಾದಿಗಳ ಮನೆಯವರು ತಿಂಡಿ-ಕಾಫಿ ಎಲ್ಲಾ ತಂದು ಕೊಟ್ಟರು, ಎಲ್ಲರೂ ಅನಿವಾರ್ಯವಾಗಿ ತಿಂಡಿ-ಕಾಫಿ ಮುಗಿಸಿದೆವು. ರಾಹು ಕಾಲ ಮುಗಿದ ನಂತರ ಶವ ಎತ್ತುವುದು ಎಂದು ಹೇಳಿದ್ದರು. ಅಮ್ಮನ ಬಳೆಗಳಿದ್ದವು, ಎರಡೂ ಕೈಯ್ಯಲ್ಲಿ, ತೀರಿಕೊಂಡ ಕೂಡಲೇ ತೆಗಿಯಬೇಕಿತ್ತು, ಈಗ ಬರುತ್ತೋ, ಇಲ್ಲವೂ ಎಂದು ಮಾತನಾಡತೊಡಗಿದರು. ನಾನೇ ಹೋಗಿ ನೋಡಿದೆ ಕೈ ತಣ್ಣಗಿತ್ತು, ಬಳೆಗಳು ಆರಾಮವಾಗಿಯೇ ಬಂದವು. ತೆಗೆದು ತಮ್ಮನ ಕೈಯ್ಯಲ್ಲಿ ಬಳೆಗಳನ್ನು ಕೊಟ್ಟೆ. ನಂತರ ಬಿಸಿನೀರು ತನ್ನಿ ಎಂದರು, ಮೊದಲೆಲ್ಲಾ ಸ್ನಾನ ಮಾಡಿಸುತ್ತಿದ್ದರು, ಈಗ ಟವೆಲ್‌ನಲ್ಲಿ ಮೈ ಒರೆಸುವುದನ್ನು ಪ್ರಾರಂಭಿಸಿದರು. ಅಮ್ಮನಿಗೆ ಟವೆಲ್ ಬಾತ್ ಆಯಿತು, ನಂತರ ಇನ್ನೊಂದು ವಿಚಿತ್ರ ನಿಯಮ ಇದೆ, ತವರು ಮನೆಯಿಂದ ತಂದ ಸೀರೆ ಉಡಿಸಬೇಕು ಎಂದು, ಎಷ್ಟೊಂದು ದಿನ ಗಂಡನ ಮನೆಯಲ್ಲಿ ಬದುಕಿ ಬಾಳಿದ್ದರೂ ಸಂಸ್ಕಾರದ ದಿನ ತವರಿನ ಸೀರೆಯೇ ಉಡಿಸಬೇಕು ಎನ್ನುವುದು ಎಂತಹ ನಿಯಮವೋ ನನಗೆ ಅರ್ಥವಾಗಲಿಲ್ಲ. ಅಮ್ಮನ ಅಣ್ಣ ಮಗ ಹಸಿರು ಸೀರೆ ಬಳೆಗಳನ್ನು ತಂದಿದ್ದ, ಎಣ್ಣೆ, ಬಾಚಣಿಗೆಯನ್ನೂ ತರುತ್ತಾರೆ. ಅಕ್ಕ ಸೀರೆ ಉಡಿಸಿದಳು, ತಲೆಯನ್ನೂ ಬಾಚಿದ್ದಾಯಿತು, ಅಮ್ಮನಿಗೆ ಹಸಿರು ಸೀರೆ ಚೆನ್ನಾಗಿ ಒಪ್ಪುತ್ತಿತ್ತು, ಅಮ್ಮನನ್ನು ಚಟ್ಟದಲ್ಲಿ ಮಲಗಿಸಿದರು, ಶವಯಾತ್ರೆಗೆ ಟ್ರ್ಯಾಕ್ಟರ್ ರೆಡಿ ಮಾಡಿದ್ದರು, ನಾನು ಕಾರಲ್ಲಿ ಹೋಗುವುದೆಂದು ಯೋಚಿಸುತ್ತಿದ್ದೆ, ಸಂಬಂಧಿ ಅಣ್ಣನೊಬ್ಬ ಅಮ್ಮನನ್ನು ಒಬ್ಬರನ್ನೇ ಕಳುಹಿಸುತ್ತೀರ ನಮ್ಮ ಅಂದಾಗ ಟಚ್ ಆಯಿತು. ಅಯ್ಯೋ ಹೌದಲ್ಲವಾ ಎಂದು, ಹೆಣ್ಣು ಮಕ್ಕಳು ನಾವೆಲ್ಲಾ ಟ್ರ್ಯಾಕ್ಟರ್‌ನಲ್ಲಿಯೇ ಹೊರಟೆವು, ತಮ್ಮ ಕಿಚ್ಚು ಹಿಡಿದಿದ್ದ, ಟ್ರ್ಯಾಕ್ಟರ್ ಮೆರವಣಿಗೆ ಮೂಲಕ ಊರ ಬಾಗಿಲ ಮುಂದೆ ಹೊರಟಿತು. ಈ ಊರ ಬಾಗಿಲು ಎಂದರೆ ಊರಿನ ಕೊನೆ ಎಂದರ್ಥ. ಆದರೆ, ಅದಕ್ಕೂ ಮೀರಿ ಹಿಂದೆ ಮುಂದೆ ಊರು ಬೆಳೆದಿತ್ತು.



ಬಾಲ್ಯದಲಿ ಓಡಾಡಿದ ಬೀದಿಗಳನ್ನು ನೋಡಿ ಊರು ಬಹಳ ಬದಲಾಗಿದೆ ಎಂದು ಅನಿಸಿತು. ಹೆಂಚಿನ ಮನೆಗಳು ಇದ್ದ ಜಾಗದಲ್ಲಿ ಆರ್.ಸಿ.ಸಿ. ಮನೆಗಳು ತಲೆ ಎತ್ತಿದ್ದವು. ತಂದೆಯವರ ದಾಯಾದಿಗಳ ಜಮೀನಿನಲ್ಲಿ ಶವ ಸಂಸ್ಕಾರಕ್ಕೆಂದೇ ಜಾಗ ಇಟ್ಟುಕೊಂಡಿದ್ದರು, ಅಲ್ಲಿಯೇ ಸಂಸ್ಕಾರ ಮಾಡುವುದೆಂದು ಮೊದಲೇ ನಿರ್ಧರಿಸಿದ್ದರು, ಅಲ್ಲಿಗೆ ಶವ ಯಾತ್ರೆ ಹೊರಟಿತು. ಮತ್ತೊಂದು ಬಾರಿ ಪೂಜೆ ಮಾಡಿ ಶವವನ್ನು ಗುಂಡಿಗೆ ಇಳಿಸಿದರು. ನಾವು ಕಿವಿ ಓಲೆಯನ್ನು ತೆಗೆದಿರಲಿಲ್ಲ, ಅಲ್ಲಿ ಸಂಸ್ಕಾರ ಮಾಡಿಸಲು ಬಂದವರು ಅಸಮಾಧಾನದಲ್ಲೇ ಓಲೆ ತೆಗೆದುಕೊಟ್ಟರು, ಭಾವ ಮೂಗುತಿ ತೆಗೆಯಲ್ಲವಾ ಎಂದು ಕೇಳಿದರು, ಬೇಡ ಎಂದು ಸುಮ್ಮನಾದೆವು. ಶವ ಸಂಸ್ಕಾರ ಮುಗಿದು ಮೂರನೇ ದಿನಕ್ಕೆ ಹಾಲು-ತುಪ್ಪ ಬಿಡುವುದು ಎನ್ನುವ ಕಾರ್ಯ ಮಾಡಿದರು. ನಂತರ ದೀಪಾವಳಿ ಹತ್ತಿರವಿದ್ದ ಕಾರಣ ಎಲ್ಲರೂ ಸೂತಕ ಐದನೇ ದಿನಕ್ಕೆ ತೆಗೆದುಕೊಳ್ಳಬೇಕು ಎಂದರು. ಈ ಸೂತಕ ತೆಗೆಯುವುದು ಎಂದರೆ, ಮನೆಯಲ್ಲಾ ಕ್ಲೀನ್ ಮಾಡಿ ದಾಸಯ್ಯನಿಗೆ ಕರೆದು ಪೂಜೆ ಮಾಡಿ ಊಟ ಬಡಿಸಬೇಕು ಮತ್ತು ಆವತ್ತಿನಿಂದ ಮನೆಯಲ್ಲಿ ದೇವರ ಪೂಜೆ ಮಾಡುತ್ತಾರೆ. ಹನ್ನೊಂದನೇ ದಿನ ತಿಥಿ ಎಂದು ತೀರ್ಮಾನವಾಗಿತ್ತು, ತಿಥಿ ಕಾರ್ಯಕ್ಕೆ ಮನೆಯಲ್ಲಿ ತಯಾರಿ ನಡೆಯುತ್ತಿತ್ತು, ತಿಥಿಯ ಅಡುಗೆಗೆ ಖಾರದ ಪುಡಿ ಸಾಂಬಾರ್ ಪುಡಿ ಕೇಳುತ್ತಿದ್ದರು, ಬೇಕು ಎಂದು ಅಡಿಗೆಯವರು ಮನೆಯಲ್ಲಿ ಅಮ್ಮನ ಮಾಡಿದ ಪುಡಿಗಳೇ ಇದ್ದವು. ನನಗೆ ಮನಸ್ಸಿನಲ್ಲಿ ವಿಚಿತ್ರ ಅನಿಸಿತು. ಅಮ್ಮ ಮಾಡಿದ ಪುಡಿಗಳು ಮತ್ತು ಅಮ್ಮನೇ ಕಾಯಿಸಿಟ್ಟ ತುಪ್ಪ ಅಮ್ಮನ ಎಡೆಗೆ ಬಳಸುತ್ತಿದ್ದೇವೆ ಎಂದು ಸಂಕಟವಾಗುತ್ತಿತ್ತು. ತಿಥಿ ಮುಗಿದ ಮೇಲೆ ಅಮ್ಮನ ಸೀರೆಗಳನ್ನೆಲ್ಲಾ ಹರಡಿಕೊಂಡು ಕೂತಿದ್ದೆವು, ನಾವು ಹೆಣ್ಣು ಮಕ್ಕಳೆಲ್ಲಾ ಅಮ್ಮನಿಗೆ ನಾವೇ ಕೊಡಿಸಿದ ರೇಷ್ಮೆ ಸೀರೆಗಳನ್ನೆಲ್ಲಾ ನಾವು ನಾವೇ ತೆಗೆದುಕೊಂಡೆವು, ಸೊಸೆನೂ ಅವಳಿಗೆ ಬೇಕಾದ್ದು ತೆಗೆದುಕೊಳಡಳು. ಅವಳು, ಅವಳ ಮನೆಯ ಗೃಹ ಪ್ರವೇಶಕ್ಕೆ ಕೊಟ್ಟ ಸೀರೆಯನ್ನು ಅಮ್ಮ ಬ್ಲೌಸ್ ಹೊಲಿಸದೇ ಹಾಗೆಯೇ ಇಟ್ಟಿದ್ದರು, ಅದು ಅವಳಿಗೆ ಏನನಿಸಿತೋ, ಅಮ್ಮ ಸೀರೆ ಸ್ವಲ್ಪದಪ್ಪ ಇದ್ದರೆ ಅವರಿಗೆ ಇಷ್ಟ ಆಗುತ್ತಿರಲಿಲ್ಲ, ದಪ್ಪೂತಿ ಆಗಿದೆ ಬೇಡ ಎಂದು ಬಿಡುತ್ತಿದ್ದರು. ಇನ್ನು ಸ್ಟೀಲ್ ಪಾತ್ರೆಗಳಂತೂ ಕೆಲಸದವರು ಕದಿಯುತ್ತಾರೆ ಎಂದು ಬೀರುವಿನಲ್ಲಿ ತುಂಬಿಸಿಟ್ಟಿದ್ದರು, ಅದರಲ್ಲಿ ಸ್ವಲ್ಪ ಪಾತ್ರೆಗಳಲ್ಲಿ ರೈಲು ವಿಭಿನ್ನವಾಗಿದ್ದ ಚೊಂಬನ್ನು ಅಕ್ಕ ತೆಗೆದುಕೊಂಡಳು. ನಾನು ಕಾಫಿ ಮಗ್, ಎಲೆ-ಅಡಿಕೆತಟ್ಟೆ, ಅದು ಹೇಗಿತ್ತೆಂದರೆ, ಮಧ್ಯದಲ್ಲಿ ಎಲೆಯ ಶೇಪ್, ಸುತ್ತಲೂ ಅಡಿಕೆ, ಸುಣ್ಣ, ಏಲಕ್ಕಿ ಇಡಲು ಬೇರೆ ಬೇರೆ ಸಣ್ಣ ಪಾರ್ಟಿಶನ್‌ಗಳಿದ್ದವು, ಮನೆಯಲ್ಲಿ ಏನೇ ಫಂಕ್ಷನ್ ಆದರೂ, ಅದರಲ್ಲಿ ಎಲೆ ಅಡಿಕೆ ಇಡುತ್ತಿದ್ದರು, ಅದನ್ನು ನಾನು ತೆಗೆದುಕೊಂಡು ಬಂದೆ.

ಮನೆಯಲ್ಲಿ ಅಮ್ಮನೇ ಕಸೂತಿ ಹಾಕಿದ ಡೋರ್ ಕರ್ಟನ್ ಮತ್ತು ಟೇಬಲ್ ಕ್ಲಾತ್‌ಗಳಿದ್ದವು, ಆ ಕಸೂತಿಗಳೆಲ್ಲಾ ಕಲರ್ ಕಾಂಬಿನೇಷನ್ ಅಷ್ಟೊಂದು ಚೆನ್ನಾಗಿದ್ದವು, ಟೇಬಲ್ ಕ್ಲಾತ್ ಬಟ್ಟೆ ಹರಿಯುವಂತಾಗಿತ್ತು, ಆದರೆ, ಆ ಡಿಜೈನ್ ಏನೂ ಆಗಿರಲಿಲ್ಲ. ಅಮ್ಮ ಹೆಚ್ಚು ಓದಿರಲಿಲ್ಲ, ಆದರೆ, ಇದನ್ನೆಲ್ಲಾ ಎಷ್ಟು ಚೆನ್ನಾಗಿ ಮಾಡಿದ್ದರು. ಕ್ರೋಶಾದಲ್ಲಿ ಕೂಡಾ ಒಂದು ಟೇಬಲ್ ಕ್ಲಾತ್ ಮಾಡಿದ್ದರು, ಅದು ಅಚ್ಚ ಬಿಳಿಯಬಣ್ಣದ ಕ್ಲಾತ್, ಕ್ರೋಶಾ ಹಾಕುವುದು ಸ್ವಲ್ಪ ಕಷ್ಟ ಎಂದು ಹೇಳುತ್ತಾರೆ, ಅದನ್ನು ಚೆನ್ನಾಗಿ ಮಾಡಿದ್ದರು ಅಮ್ಮ. ಅವರದು ಯಾವಾಗಲೂ ಒಂದು ಡೈಲಾಗ್ ಇರುತ್ತಿತ್ತು. ನಿಮ್ಮಂಗೆ ಓದಿದ್ದರೆ ನಾನು ಇನ್ನೂ ಎಲ್ಲವನ್ನೂ ಚೆನ್ನಾಗಿ ಮಾಡುತ್ತಿದ್ದೆ ಎಂದು ನಮಗೆಲ್ಲಾ ಹೇಳುತ್ತಿದ್ದರು.

ಇನ್ನೊಂದು ನನಗೆ ಬೇಸರವನ್ನು ಉಂಟುಮಾಡಿದ್ದು, ಅಮ್ಮ ತುಂಬಾ ಚೆನ್ನಾಗಿ ಉಪ್ಪಿನಕಾಯಿ ಹಾಕುತ್ತಿದ್ದರು, ಒಂದು ದೊಡ್ಡ ಪಿಂಗಾಣಿ ಜಾಡಿ ಇತ್ತು, ಅದನ್ನು ನೋಡಿ ಅಯ್ಯೋ ಉಪ್ಪಿನ ಕಾಯಿಯ ರೆಸಿಪಿಯನ್ನೇ ನಾವು ಕಲಿಯಲಿಲ್ಲವಲ್ಲಾ ಎಂದು ಬೇಸರವಾಗುತ್ತಿತ್ತು. ತಿಥಿ ಎಲ್ಲಾ ಮುಗಿಸಿ ಹೊರಡುವಾಗ ನನ್ನ ಮನದಲ್ಲಿ ಇದ್ದದ್ದು ಒಂದೇ ಕೊರಗು, ಅಮ್ಮನಿಗೆ ಆಪರೇಷನ್ ಆಗಿ ಮತ್ತು ಕರೋನ ಟೈಮ್‌ನಲ್ಲಿ ಎಲ್ಲಾ ಕಡೆ ಓಡಾಡಲು ಕಷ್ಟವಿದ್ದಾಗ ಅಮ್ಮನನ್ನು ಸರಿಯಾಗಿ ನೋಡಿಕೊಳ್ಳಲಿಲ್ಲವೇನೋ ಎನ್ನುವ ಕೊರಗು ನನ್ನ ಮನದಲ್ಲಿ ಉಳಿದಿತ್ತು, ಕಡೆಯದಾಗಿ ಅಮ್ಮ ಬಳಸುತ್ತಿದ್ದ ಚಪ್ಪಲಿಯನ್ನು ತೆಗೆದುಕೊಂಡು ಬೆಂಗಳೂರಿಗೆ ಬಂದೆ.....

**– ವಿಜಯಕುಮಾರಿ** ಬಿ.



# ಕಾವೇರುತ್ತಿರುವ ಭೂಮಿ: ಈ ಕ್ಷಣ ಎಚ್ಚೆತ್ತುಕೊಳ್ಳೋಣ

ಜರ್ಮನಿಯಂಥ ತಂಪು ಹವಾಮಾನದ ಜಾಗದಲ್ಲಿ ಇಂದು ಬಿಸಿಗಾಳಿ ಮತ್ತು ಕಾಳಿಚ್ಚು ತಾಂಡವವಾಡುತ್ತಿದೆ. ಜರ್ಮನಿ ಮಾತ್ರ ಅಲ್ಲ ಇಡೀ ಯುರೋಪ್ ಇಂಥದ್ದೇ ಪರಿಸ್ಥಿತಿಯಲ್ಲಿ ಬೇಯುತ್ತಿದೆ. ಇತ್ತ ಭಾರತ ಸಹಿತ ಭೂಮಧ್ಯ ರೇಖೆಯ ಆಸುಪಾಸಿನ ದೇಶಗಳಲ್ಲಿ ಸಕಾಲಕ್ಕೆ ಮಳೆಯಾಗದೆ ಬರಗಾಲದ ಭೀತಿ ಎದುರಾಗಿದೆ. ಈಗಲೂ ಕಾಲ ಮಿಂಚಿಲ್ಲ ತತ್‌ಕ್ಷಣ ಪ್ರತಿಯೊಬ್ಬರೂ ಎಚ್ಚೆತ್ತುಕೊಂಡರೆ ಈ ಭೂಮಿಯನ್ನು ವಾಸಯೋಗ್ಯ ಗ್ರಹವಾಗಿ ಮುಂದಿನ ಪೀಳಿಗೆಗಳಿಗೆ ನಾವು ಉಳಿಸಿಕೊಳ್ಳಬಹುದಾಗಿದೆ.

ಇವೆಲ್ಲವೂ ವಿಜ್ಞಾನಿಗಳು ದಶಕಗಳ ಹಿಂದೆಯೇ ನೀಡಿದ್ದ ಹವಾಮಾನ ವೈಪರೀತ್ಯದ ಎಚ್ಚರಿಕೆಯ ಸ್ಪಷ್ಟ ಮುನ್ಸೂಚನೆಗಳು. ನಾವು ಪ್ರಕೃತಿಗೆ ಮಾಡಿದ ದ್ರೋಹದ ಫಲವನ್ನು ನಾವೀಗ ಉಣ್ಣಲಾರಂಭಿಸಿದ್ದೇವೆ.

ಜಾಗತಿಕ ತಾಪಮಾನವು ಕೇವಲ ಒಂದು ದೇಶ ಅಥವಾ ಪ್ರಾಂತ್ಯಕ್ಕೆ ಸೀಮಿತವಾಗಿಲ್ಲ ಎಂಬುದಕ್ಕೆ ಇತ್ತೀಚೆಗಿನ ದತ್ತಾಂಶಗಳೇ ಸಾಕ್ಷಿ ಜಾಗತಿಕ ಕಾರ್ಬನ್ ಪ್ರಾಜೆಕ್ಟ್ ವರದಿಗಳ ಪ್ರಕಾರ, ವಾತಾವರಣದಲ್ಲಿರುವ ಇಂಗಾಲದ ಡೈಆಕ್ಸೆಡ್ ಪ್ರಮಾಣವು ಕೈಗಾರಿಕಾ ಕ್ರಾಂತಿಗಿಂತ ಮುಂಚಿನ ಅವಧಿಗೆ ಹೋಲಿಸಿದರೆ ಶೇ. 50ಕ್ಕಿಂತ ಹೆಚ್ಚಾಗಿದೆ. ಐರೋಪ್ಯ ಒಕ್ಕೂಟದ ಕೋಪರ್ನಿಕಸ್ ಹವಾಮಾನ ಬದಲಾವಣೆ ಸೇವೆಯ ಪ್ರಕಾರ, ಇತ್ತೀಚೆಗಿನ ವರ್ಷಗಳು ಇತಿಹಾಸದಲ್ಲೇ ಅತ್ಯಂತ ಹೆಚ್ಚು ಉಷ್ಣಾಂಶ ದಾಖಲಾದ ವರ್ಷಗಳಾಗಿವೆ. ಜರ್ಮನಿಯಲ್ಲಿ ತಾಪಮಾನವು 40 ಡಿಗ್ರಿ ಸೆ. ದಾಟುತ್ತಿದ್ದರೆ, ಇತ್ತ ಭಾರತದಲ್ಲಿ ಮುಂಗಾರು ಮಳೆಯ ಕೊರತೆಯು ಶೇ. 10ರಿಂದ 15ರಷ್ಟು ತಲುಪುತ್ತಿರುವುದು ಕೃಷಿ ವಲಯ ಹಾಗೂ ಜಲಮೂಲಗಳನ್ನು ತಲ್ಲಣಗೊಳಿಸಿದೆ.

ನಾವು ನೆನಪಿಡಬೇಕಾದ ವಿಷಯ ಎಂದರೆ, ಹವಾಮಾನ ವೈಪರೀತ್ಯ ಎಂಬುದು ಇನ್ನು ಮುಂದೆ ಕೇವಲ ಭವಿಷ್ಯದ ಆತಂಕವಲ್ಲ, ಅದು ನಮ್ಮ ದೈನಂದಿನ ಬದುಕನ್ನು ಮತ್ತು ಆರ್ಥಿಕತೆಯನ್ನು ನುಂಗುತ್ತಿರುವ ಕಟು ಸತ್ಯ. ಇಂತಹ ಪರಿಸರ ಏರುಪೇರುಗಳು ಕೇವಲ ಈ ವರ್ಷಕ್ಕೆ ಮುಗಿಯುವಂಥದ್ದಲ್ಲ, ಇನ್ನು ಮುಂದೆ ಇವುಗಳ ತೀವ್ರತೆ, ಪ್ರವಾಹಗಳು ಮತ್ತು ಬರಗಾಲದ ಆವರ್ತನ ಮತ್ತಷ್ಟು ಹೆಚ್ಚಾಗಲಿದೆ ಎಂದು ವಿಶ್ವ ಸಂಸ್ಥೆಯ ಅಂತರ್ ಸರಕಾರ ಹವಾಮಾನ ಬದಲಾವಣೆ ಸಮಿತಿ (ಐಪಿಸಿಸಿ) ವರದಿ ಸ್ಪಷ್ಟಪಡಿಸಿದೆ.

ನಾವು ವಾತಾವರಣಕ್ಕೆ ಸೂಸುವ ಹಸಿರು ಮನೆ ಅನಿಲಗಳ ಪ್ರಮಾಣವನ್ನು ತಗ್ಗಿಸದಿದ್ದರೆ, ಉಷ್ಣಾಂಶದ ಏರಿಕೆ ತಡೆಯಲು ಸಾಧ್ಯವಿಲ್ಲ. ಆದ್ದರಿಂದ ನಾವೀಗ ಸಮರೋಪಾದಿಯಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯ ಇದೆ. ಸರಕಾರಗಳ ಮಟ್ಟದಲ್ಲಿ ಪಳೆಯುಳಿಕೆ ಇಂಧನಗಳ ಬಳಕೆಯನ್ನು ಕಟ್ಟುನಿಟ್ಟಾಗಿ ಕಡಿತಗೊಳಿಸಿ, ಸೌರ ಮತ್ತು ಪವನ ಶಕ್ತಿಯಂತಹ ನವೀಕರಿಸಬಹುದಾದ ಇಂಧನಗಳಿಗೆ ತತ್‌ಕ್ಷಣವೇ ಆದ್ಯತೆ ನೀಡಬೇಕು. ಹಸಿರು ವಲಯಗಳನ್ನು ಹೆಚ್ಚಿಸಲು ಮತ್ತು ಅರಣ್ಯ ನಾಶ ತಡೆಯಲು ಕಠಿನ ಕಾನೂನು ಜಾರಿಗೆ ತರಬೇಕು. ಕಾರ್ಬನ್ ಹೊರಸೂಸುವಿಕೆಯನ್ನು ಶೂನ್ಯಕ್ಕಿಳಿಸುವ ಗುರಿಯನ್ನು ಶೀಘ್ರವಾಗಿ ತಲುಪಬೇಕು. ನಾಗರಿಕರ ಮಟ್ಟದಲ್ಲಿ ಪ್ರತಿಯೊಬ್ಬ ನಾಗರಿಕನೂ ಕೇವಲ ಮೂಕಪ್ರೇಕ್ಷಕನಾಗದೆ ಪ್ಲಾಸ್ಟಿಕ್ ಬಳಕೆ ನಿಲ್ಲಿಸುವುದು, ಜಲಮೂಲಗಳ ಸಂರಕ್ಷಣ, ಸಾರ್ವಜನಿಕ ಸಾರಿಗೆಯ ಬಳಕೆ ಮತ್ತು ವರ್ಷಕ್ಕೊಂದು ಗಿಡ ನೆಟ್ಟು ಪೋಷಿಸುವ ಮೂಲಕ ತನ್ನ ಕೊಡುಗೆ ನೀಡಬೇಕು. ಶಕ್ತಿಯ ಮಿತವ್ಯಯ ಬಳಕೆ ನಮ್ಮ ದೈನಂದಿನ ಶೈಲಿಯಾಗಬೇಕು.

ಭೂಮಿಯನ್ನು ಜೀವಿಸಬಲ್ಲ ಗ್ರಹವಾಗಿ ಉಳಿಸಿಕೊಳ್ಳಲು ಸರಕಾರಗಳು ಮತ್ತು ನಾಗರಿಕರು ಒಟ್ಟಾಗಿ ಜವಾಬ್ದಾರಿಯಿಂದ ಶ್ರಮಿಸದಿದ್ದರೆ, ಮುಂದಿನ ಪೀಳಿಗೆಗೆ ನಾವು ಕೇವಲ ಬೂದಿಯಾಗುತ್ತಿರುವ ವಾಸಯೋಗ್ಯವಲ್ಲದ ಭೂಮಿಯನ್ನಷ್ಟೇ ಉಳಿಸಲು ಸಾಧ್ಯ. ಈಗಲೂ ಕಾಲ ಮಿಂಚಿಲ್ಲ ಪ್ರಕೃತಿಯ ಈ ಕೊನೆಯ ಎಚ್ಚರಿಕೆಗೆ ನಾವು ತತ್‌ಕ್ಷಣವೇ ಸ್ಪಂದಿಸಬೇಕಾಗಿದೆ.

**– ಕೆ.ಪಿ.ಅಶ್ವಿನ್** ರಾವ್

